ಜನಪದ ವಿಚಾರ

ಕ್ರಿಸ್ತ: ಒಂದು ಕವಿತಾಗುಚ್ಛ

ಜಾತಿ ಪದ್ಧತಿ: ಗಾಂಧಿ ಮತ್ತು ಅಂಬೇಡ್ಕರ್ ದೃಷ್ಟಿ

ಸತ್ಯ ಮತ್ತು ಮೌಲ್ಯ

ಗಾಂಧಿ - ಅಂಬೇಡ್ಕರ್ ಎಂಬ ಒಗಟು ಮತ್ತು ವಿಸ್ಮಯ

ಸಂಪುಟ - ೧೮ ಡಿಸೆಂಬರ್ -೨೦೧೭ ಸಂಚಿಕೆ - ೫

ಜನಪದ ವಿಚಾರದಲ್ಲಿ

ಡಿಸೆಂಬರ್ – ೨೦೧೭

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಡಿಸೆಂಬರ್- ೨೦೧೭
ಸಂಪುಟ - ೧೮
ಸಂಚಿಕೆ - ೫

ಸಂಚಿಕೆಯ ಸಂಪಾದಕರು
ಸಂತೋಷ್ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಪೋನ್ : 7829489147
08236 - 299854
email :
janapada@yahoo.com
Web: janapada.org

ಕ್ರಿಸ್ತ: ಒಂದು ಕವಿತಾಗುಚ್ಛ

೧

ಗೊಲ್ಗೊಥಾದ ದಿಗಿಲಿಕ್ಕುವ ಮೌನಕ್ಕೆ
ಇಂದು ಹುಣ್ಣಿಮೆ ಚೆಲ್ಲುತ್ತದೆ. ದೂರದ ಒಂಟಿ
ಬಾನಾಡಿ ಎಲ್ಲಿಂದಲೋ ಇಲ್ಲಿಗೆ ಹಾರಿ ಬಂದು
ಗೊತ್ತಾಗದ ಹಾಗೆ ಅಳುತ್ತದೆ -ಕ್ರಿಸ್ತ-
ಎಲ್ಲ ನೆನಪಾಗಿಯೋ ಏನೋ
ರೆಕ್ಕೆ ಬಡಿದು ಪಟಪಟ ಬಾನಾಡಿ ನಿಶ್ಯಬ್ದ
ಅಳಲುತ್ತದೆ; ಕ್ರಿಸ್ತಾ,
ನಮ್ಮ ಮನುಕುಲದ ಕ್ರೌರ್ಯಕ್ಕೆ ಸುತ್ತಲೂ
ಶ್ರುತಿ ಹಿಡಿಯುತ್ತದೆ.

೨

ಕೊಳ್ಳಿಯಿಟ್ಟಾಗಲೂ ಕರುಳಿಗೆ 'ಕ್ಷಮಿಸಿವರ' ಎನುತ
ಶಿಲುಬೆ-ರಥವೇರಿ
ತುಟಿಕಚ್ಚಿ ಕಳಚಿಕೊಂಡವ ನೀನು -
ಕಳಚಿದರೂ ಸಹಾ ಹಕ್ಕಿಗೊರಳಲ್ಲಿ ಇಂಪಾಗಿ,
ಹೊಳೆಯಲ್ಲಿ ಜುಳುಜುಳು
ಹಾಡಾಗಿ ಸ್ಥಾಯಿ ನಿಂತವ ನೀನು -
ಮುಗ್ಧ ಕಂಗಳಲ್ಲಿ, ಕೊರಳಿಂದ ಎದೆತನಕ
ತೂಗುವಬೆಳ್ಳಿಕ್ರಾಸುಗಳಲ್ಲಿ
ಮಿನುಗುವ ಸಾಕ್ಷಿಪ್ರಜ್ಞೆ ನೀನು -
ದೂರ ಗಿಡ ಗುಡ್ಡ ಬಾನಂಚನ್ನೆಲ್ಲ ಆಳುವ ಈ
ಪೌರ್ಣಿಮೆಯಲ್ಲಿ
ನನ್ನ ಸಣ್ಣತನಕ್ಕೆ ಮರುಗಿದವ ನೀನು -
ಎಂದು ಹಾಗೆ ಹೀಗೆ ಮೊಸಳೆ-ಕಣ್ಣೀರು ಸುರಿಸುವ
ನಾನು ಮತ್ತು ನನ್ನ ಈ ಬಡ ಅಕ್ಷರಗಳ
ಹಾಸು ಬೀಸಿಗೆ ಓ, ಯೇಸು, ಗೊತ್ತು ಸಿಕ್ಕದವ ನೀನು.

೩

ಮಧ್ಯಪ್ರಾಚ್ಯದಲ್ಲಿಂದು ಧಗಧಗ ಕಾಡಬೆಂಕಿ.
ಬೆತ್ಲಹೆಮ್ಮಿನ ಒಡಲಲ್ಲೂ ಚಾಚಲೊದಗುವ
ಕೆನ್ನಾಲಗೆಯ ಭಂಗಿ - ಒಬ್ಬನಾದರೂ ನಿನ್ನ
ಪುನರಾಗಮನಕ್ಕೆ
ಕಾದ ಸಭ್ಯನಿರಬಹುದು ಅಲ್ಲಿ - ಆದರೂ ಹೇಳು-
ಬೇಕಲ್ಲವೆ ಎಲ್ಲಕೂ ಮೊದಲು ಕೊಂಚವಾದರೂ
ನೀರು ನೆರಳಿರುವ
ಮಣ್ಣು - ಮೊಳಕೆಗಾಶಿಸುವ ಬೀಜಕ್ಕೆ ಹಾರೈಸುವ
ನೂರಾರು ಕಣ್ಣು?

ಎಂ.ಎಸ್. ಜೈಪ್ರಕಾಶ್

(ಈ ಕವನದ ಬಗೆಗಿನ ಟಿಪ್ಪಣಿಗಾಗಿ ಪುಟ -೧೧ನ್ನು ನೋಡಿ)

ನಿಮ್ಮೊಂದಿಗೆ

ಇದು ಈ ವರ್ಷದ ಕಡೆಯ ಸಂಚಿಕೆ. ಡಿಸೆಂಬರ್ ಬಂದೊಡನೆ ಅಂಬೇಡ್ಕರ್ ಮತ್ತು ಕ್ರಿಸ್ತನ ನೆನಪಾಗುತ್ತದೆ. ಗಾಂಧಿ ನಮಗೆ ಇವರಿಬ್ಬರ ಹದವಾದ ಮಿಶ್ರಣದಂತೆ ಕಾಣುತ್ತಾರೆ. ಇಂದಿನ ಸಮಾಜದ ಉನ್ನತೀಕರಣಕ್ಕೆ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಅನಿವಾರ್ಯವಾಗಿ ತೋರುತ್ತಿದ್ದಾರೆ. ಇವರಿಬ್ಬರನ್ನು ಮುಖಾಮುಖಿ ನಿಲ್ಲಿಸದೆ ಅವರಿಬ್ಬರನ್ನೂ ಅಕ್ಕ ಪಕ್ಕ ಇಟ್ಟು ನಾವು ಇಂದು ನೋಡಬೇಕಿದೆ. 'ಗಾಂಧಿ ಮನೆಯನ್ನು ಒಳಗಿನಿಂದ ರಿಪೇರಿ ಮಾಡಲು ನೋಡಿದರೆ ಅಂಬೇಡ್ಕರ್ ಹೊರಗಿನಿಂದ ರಿಪೇರಿ ಮಾಡಲು ಪ್ರಯತ್ನಿಸಿದರು' ಎಂಬ ದೇವನೂರು ಮಹದೇವ ಅವರು ಮಾತು ನಮಗೆ ಇವರಿಬ್ಬರನ್ನೂ ಆಪ್ತವಾಗಿಸುತ್ತದೆ. ಇಂದು ದೇಶ ಎದುರಿಸುತ್ತಿರುವ ಸಾಮಾಜಿಕ ಅಸಮಾನತೆ, ಆರ್ಥಿಕ ಅಸಮಾನತೆ, ನಿರುದ್ಯೋಗ, ನಗರೀಕರಣ, ಕೇಂದ್ರೀಕರಣ, ಪರಿಸರ ವಿನಾಶ ಇವೆಲ್ಲಕ್ಕೂ ಉತ್ತರ ಈ ಎರಡು ಮಹಾನ್ ಚೇತನಗಳ ವಿಚಾರಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ನಾವು ಮನ್ನಡೆಯುವುದರಲ್ಲಿದೆ. ಈ ಸಂಚಿಕೆಗಾಗಿ ಕನ್ನಡದ ಹಿರಿಯ ಸಮಾಜವಾದಿ ಚಿಂತಕರಾದ ಶ್ರೀ. ಡಿ.ಎಸ್.ನಾಗಭೂಷಣ ಮತ್ತು ಚಿಂತಕರೂ ಬರಹಗಾರರೂ ಆದ ಶ್ರೀ ನಾಗಭೂಷಣ ಅವರು ಅಂಬೇಡ್ಕರ ಅವರನ್ನು ಕುರಿತು ಲೇಖನಗಳನ್ನು ಬರೆದುಕೊಟ್ಟಿದ್ದಾರೆ.

ಸಾಮಾಜಿಕ ಮಾಧ್ಯಮಗಳ ಭರಾಟೆಯ ಕಾಲದಲ್ಲಿ ಬಹಳ ಜನರು ಅತ್ಯಂತ ವೇಗವಾಗಿ ಎಲ್ಲದಕ್ಕೂ ಪ್ರತಿಕ್ರಿಯಿಸತೊಡಗಿದ್ದಾರೆ. ಅದಕ್ಕಿಂತಲೂ ಹೆಚ್ಚಿನ ಜನ ಎರವಲು ಅಭಿಪ್ರಾಯಗಳನ್ನು ತಮ್ಮದು ಎಂದು ಬಿಂಬಿಸುತ್ತಿದ್ದಾರೆ. ಎಲ್ಲರೂ ಒಂದು ರೀತಿಯ ಹಟಕ್ಕೆ ಬಿದ್ದು ತಮ್ಮ ವಾದವನ್ನು, ನಿಲುವನ್ನು ಗೆಲ್ಲಿಸಬೇಕೆಂಬ ಪಣತೊಟ್ಟಂತೆ ಕಾಣುತ್ತಿದೆ. ಸಾರ್ವಜನಿಕವಾಗಿ ವ್ಯಕ್ತ ಪಡಿಸುವ ಅಭಿಪ್ರಾಯಗಳಲ್ಲಿ ಈ ಹಿಂದೆ ಕಂಡು ಬರುತ್ತಿದ್ದ ಸೌಜನ್ಯವಾಗಲಿ, ಭಾಷೆಯ ಮೇಲಿನ ಗಮನವಾಗಲಿ ನಿಧಾನವಾಗಿ ಮಾಯವಾಗಿ ಹೋಗಿದೆ. ಈ ಗಲಾಟೆಯಲ್ಲಿ ವಿಷಯದ ಸತ್ಯಾಸತ್ಯತೆ ಎಲ್ಲೋ ಮಾಯವಾಗಿ ಹೊರಟುಹೋಗಿರುತ್ತದೆ. ನಮ್ಮ ತಲೆಮಾರಿನವರಲ್ಲಿ ಸತ್ಯದ ಬಗ್ಗೆ ಸರಿಯಾದ ಉತ್ತರಗಳು ಸಿಗದ್ದಿದ್ದಾಗ ವಿ.ಸೀ ಯವರು ಸತ್ಯದ ಬಗ್ಗೆ ಬರೆದಿರುವ ಪ್ರಬಂಧ ಒಂದು ಸಿಕ್ಕಿತು. ಸತ್ಯದ ಹುಡುಕಾಟ ಅಷ್ಟು ಸಾಧ್ಯವಿಲ್ಲವೆಂದು ಆ ಪ್ರಬಂಧ

ಓದಿದವರಿಗೆ ಅನಿಸಬಹುದು. ಸತ್ಯವನ್ನು ಅರಿಯದೆ ಸಗಣಿ ಎರಚುವ ಆಟದಲ್ಲಿ ಮುಳುಗಿರುವ ನಮ್ಮ ತಲೆಮಾರಿನವರಿಗೆ ಕಣ್ಣು ತೆರೆಸಬಹುದೇನೋ ಅನಿಸಿ ಆ ಪ್ರಬಂಧವನ್ನು ಇಲ್ಲಿ ಪ್ರಕಟಿಸಲಾಗಿದೆ.

ಮಾಮೂಲಿನಂತೆ ಶ್ರೀ ಶ್ರೀನಿವಾಸ ಉಡುಪರು ತಿಂಗಳಿಗೆ ಒಪ್ಪುವ ಕವನ ಒಂದನ್ನು ಆಯ್ಕೆ ಮಾಡಿ ಕೊಟ್ಟಿದ್ದಾರೆ. ಜೊತೆಗೆ ಇನ್ನೊಂದಿಷ್ಟ ಲೇಖನಗಳು ನಿಮ್ಮ ಓದಿಗಾಗಿ ನಿಮ್ಮ ಮುಂದೆ ಈ ಸಂಚಿಕೆಯಲ್ಲಿ ಜೋಡಿಸಿದ್ದೇವೆ. ಈ ಪತ್ರಿಕೆ ಹೊರಬರಲು ಸಹಕರಿದ ಎಲ್ಲ ಲೇಖಕರಿಗೂ ವಂದನೆಗಳು

ನಿಮ್ಮ ಬೆಂಬಲ ನಮಗಿರಲಿ. ●

ಜಾತಿ ಪದ್ಧತಿ: ಗಾಂಧಿ ಮತ್ತು ಅಂಬೇಡ್ಕರ್ ದೃಷ್ಟಿ

–ಡಿ.ಎಸ್. ನಾಗಭೂಷಣ

ಬಹಳ ಜನ ಕೇಳುವ ಪ್ರಶ್ನೆ: ಅಸ್ಪೃಶ್ಯತೆಯನ್ನು ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟದ ಭಾಗವಾಗಿ ಮಾಡಿಕೊಳ್ಳುವಷ್ಟು ಗಂಭೀರವಾಗಿ ಪರಿಗಣಿಸಿದ ಗಾಂಧಿ ಜಾತಿ ಪದ್ಧತಿಯ ವಿರುದ್ಧವೇಕೆ ಮಾತಾಡಲಿಲ್ಲ ಮತ್ತು ಕಾರ್ಯಕ್ರಮಗಳನ್ನು ರೂಪಿಸಲಿಲ್ಲ? ಗಾಂಧಿ ಪ್ರಕಾರ ಜಾತಿ ಪದ್ಧತಿ ಅ–'ಸ್ಪೃಶ್ಯತೆ'ಯ ಭಾವನೆಯ ಸಂಸ್ಥೀಕರಣ ಪ್ರಕ್ರಿಯೆಯಲ್ಲಿ ಹುಟ್ಟಿದ ವಿದ್ಯಮಾನವಾಗಿದ್ದು, ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಪ್ರಯತ್ನದ ಮಾರ್ಗದಲ್ಲೇ ಜಾತಿ ಪದ್ಧತಿಯೂ ಹಿನ್ನೆಲೆಗೆ ಸರಿದುಹೋಗುತ್ತದೆ. (ಆಶ್ಚರ್ಯವೆಂದರೆ, ಅಂಬೇಡ್ಕರ್ ಪ್ರಕಾರವೂ ಜಾತಿ ಪದ್ಧತಿ ಎಂದರೆ ಶ್ರೇಣೀಕೃತ ಸ್ಪೃಶ್ಯತೆಯೇ–ಅಂದರೆ ಸಾರ್ವಜನಿಕ ಬದುಕಿನಲ್ಲಿ ಯಾರನ್ನು ಎಷ್ಟು ಮುಟ್ಟಬಹುದು ಎಂಬ ಮಾನಕ–ಆಗಿದ್ದು, ಅದರ ಆತ್ಯಂತಿಕ ಪರಿಣಾಮವೇ ಅಸ್ಪೃಶ್ಯತೆಯಾಗಿದೆ.) ಈ ಬಗ್ಗೆ ಒಮ್ಮೆ ತಾವು ಗಾಂಧಿಗೆ ಪ್ರಶ್ನೆಯನ್ನು ಕೇಳಿದ್ದಾಗಿಯೂ, ಅದಕ್ಕೆ ಗಾಂಧಿ ಹೀಗೆ–ತಾವು ಜಾತಿಪದ್ಧತಿಯ ತರ್ಕದ ಅತ್ಯಂತ ದುರ್ಬಲ ಕೊಂಡಿಯನ್ನು ಮುರಿದು ಹಾಕುವ ಪ್ರಯತ್ನದಲ್ಲಿರುವುದಾಗಿ–ಉತ್ತರಕೊಟ್ಟಿದ್ದಾಗಿಯೂ ನೆಹರೂ ೧೯೫೬ರಲ್ಲಿ ತಮ್ಮ ಐರೋಪ್ಯ ಪತ್ರಕರ್ತ ಮಿತ್ರ ಟಿಬೋರ್ ಮೆಂಡ್ ಅನ್ನುವವರಿಗೆ ಬರೆದ ಪತ್ರವೊಂದರಲ್ಲಿ ತಿಳಿಸಿದ್ದಾರೆ. (ನೋಡಿ: Conversations with Nehru: Tibor Mende : Wilco: ೧೯೫೮) ಅಸ್ಪೃಶ್ಯರು ಸವರ್ಣೀಯರಿಂದ ಮತ್ತಷ್ಟು ದೂರವಾಗದಂತೆ ಖಚಿತಪಡಿಸಿದ ೧೯೩೨ರ ಪೂನಾ ಒಪ್ಪಂದಕ್ಕೆ ಗಾಂಧಿ ಅಂಬೇಡ್ಕರ್‌ರೊಂದಿಗೆ ಸಹಿ ಹಾಕಿದ ನಂತರದಲ್ಲಿ ಅವರ ಮೇಲೆ ಸವರ್ಣೀಯರಿಂದ (ವಿಶೇಷವಾಗಿ ಪುರೋಹಿತಶಾಹಿ ಜಾತಿಯವರಿಂದ) ನಡೆದ 'ಇದು ಹಿಂದೂ ಧರ್ಮದ ಸಾಮಾಜಿಕ ವಿಶಿಷ್ಟತೆಯ ನಾಶ' ಎಂಬ ಕಟು ಟೀಕಾಪ್ರಹಾರ ಮತ್ತು ಎರಡು ಕೊಲೆ ಪ್ರಯತ್ನಗಳು ಗಾಂಧಿಯವರ ವಾದವನ್ನು ಪುಷ್ಟೀಕರಿಸುತ್ತವೆ. (ಇಂತಹ ಕಾರಣದಿಂದಲೇ ಕನ್ನಡ 'ಕುಲಪುರೋಹಿತ'ರೆಂದು ಕರೆಯಲಾಗುವ ಆಲೂರು ವೆಂಕಟರಾಯರು ಗಾಂಧಿ ಮತ್ತು ಕಾಂಗ್ರೆಸ್ ಸಹವಾಸವನ್ನು ತೊರೆದು 'ಹಿಂದೂ ಮಹಾಸಭಾ'ದತ್ತ ಸರಿಯುವುದು ಮತ್ತು ಈ ಪ್ರಭಾವದಲ್ಲೇ 'ಕರ್ನಾಟಕದ ಗತ ವೈಭವ'ವನ್ನು ವಿಜಯನಗರವೆಂಬ ಹಿಂದೂ ಮಹಾಸಾಮ್ರಾಜ್ಯದ ರೂಪದಲ್ಲಿ ಗುರುತಿಸುವಂತಾಗುವುದು.)

ಈ ವಿಷಯಕ್ಕೆ ಸಂಬಂಧಿಸಿದಂತೆಯೇ ಪರೋಕ್ಷವಾಗಿ ತಮ್ಮ ಮಿತ್ರ 'ಚಾರ್ಲಿ'ಎಂದೇ ಗಾಂಧಿ ಪರಿವಾರದಲ್ಲಿ ಜನಪ್ರಿಯರಾಗಿದ್ದ ಚಾರ್ಲ್ಸ್ ಆಂಡ್ರ್ಯೂಸ್

ಪತ್ರ ಮುಖೇನ ಕೇಳಿದ ಪ್ರಶ್ನೆಗಳಿಗೆ ಗಾಂಧಿ ನೀಡಿದ ಉತ್ತರಗಳು ಕುತೂಹಲಕಾರಿಯಾಗಿವೆ. ೧೯೨೧ರಲ್ಲಿ ಆಂಡ್ರ್ಯೂಸ್‌ಗೆ ಬರೆದ ಪತ್ರದಲ್ಲಿ 'ಸ್ವರಾಜ್ಯಕ್ಕಿಂತ ಅಸ್ಪೃಶ್ಯತಾ ನಿವಾರಣೆ ಕಡಿಮೆ ಮಹತ್ವದ್ದು ಎಂದು ನಾನು ಒಂದರೆಕ್ಷಣವೂ ಭಾವಿಸಿಲ್ಲ. ಆದರೆ ಅಸ್ಪೃಶ್ಯತಾ ನಿವಾರಣೆಯ ಹೋರಾಟದ ಹಾದಿಯಲ್ಲಿ ಸ್ವರಾಜ್ಯವನ್ನು ಗಳಿಸುವುದಾದದಲ್ಲಿ ಆ ಸಮಸ್ಯೆಯನ್ನು ಹೆಚ್ಚು ಪರಿಣಾಮಕಾರಿ ಯಾಗಿ ನಿರ್ವಹಿಸಬಹುದು' ಎನ್ನುತ್ತಾರೆ. ಪೂನಾ ಒಪ್ಪಂದಕ್ಕೆ ಸಹಿ ಹಾಕಿದ ನಂತರ ಅಂಬೇಡ್ಕರ್ ಗಾಂಧಿ ಬಗ್ಗೆ ಆಡಿದ ಸೌಹಾರ್ದದ ಮಾತುಗಳ ಕೊನೆಯ ವಾಕ್ಯವಾದ 'ಮಹಾತ್ಮಾಜಿ ತಮ್ಮ ಇಡೀ ಬದುಕನ್ನು ನಿಮ್ಮ ವರ್ಗಗಳ ಕ್ಷೇಮಾಭ್ಯುದಯಕ್ಕೇ ಮುಡಿಪಾಗಿಡುವುದಾದದರೆ ಅವರು ನಮ್ಮ ನಾಯಕರಾಗುತ್ತಾರೆ' ಎಂಬ ಮಾತಿನಿಂದ ಸ್ಫೂರ್ತಿಗೊಂಡಂತೆ ೧೯೩೩ರ ಒಂದು ಪತ್ರದಲ್ಲಿ ಆಂಡ್ರ್ಯೂಸ್ ಕೇಳಿದ 'ನೀವು ಒಮ್ಮೆಗೇ ಎರಡು ಕುದುರೆಗಳ ಸವಾರಿ ಮಾಡುವ ಕಸರತ್ತಿನ ಬದಲು, ಅಸ್ಪೃಶ್ಯತಾ ನಿವಾರಣೆ ಹೋರಾಟಕ್ಕೇ ನೀವೇಕೆ ತೆತ್ತುಕೊಳ್ಳಬಾರದು?' ಎಂಬ ಪ್ರಶ್ನೆಗೆ ಗಾಂಧಿ ನೀಡುವ ಉತ್ತರ ಹೀಗಿತ್ತು: 'ನನ್ನ ಬದುಕನ್ನು ನಾನು ಕಂಡುಕೊಂಡಿರುವುದು ಒಂದು ಅವಿಭಾಜ್ಯ ಅಖಂಡ ರೂಪದ್ದಾಗಿ. ಅವುಗಳಲ್ಲಿ ಕೋಣೆಗಳಿಲ್ಲ. ಹಾಗಾಗಿ ಒಮ್ಮೆ ನನ್ನ ಬೆರಳು ಸತ್ಯಾಗ್ರಹದ ಮನೆ ಮೇಲೆ, ನಂತರ ಸವಿನಯ ಕಾನೂನು ಭಂಗದ ಮನೆಯ ಮೇಲೆ, ಆನಂತರ ಅಸ್ಪೃಶ್ಯತಾ ನಿವಾರಣೆಯ ಮನೆಯ ಮೇಲೆ, ತದನಂತರ ಹಿಂದು ಮುಸ್ಲಿಂ ಐಕ್ಯತೆಯ ಮನೆ ಮೇಲೆ–ಹೀಗೆ ಪಿಯಾನೋದ ವಿವಿಧ ಮನೆಗಳ ಮೇಲೆ ವಿವಿಧ ತೀವ್ರತೆಯ ಒತ್ತುಗಳಂತೆ– ಒಂದೇ ರಾಗದ ಪರಸ್ಪರ ಸಂಬಂಧಿಸಿದ ವಿವಿಧ ಸ್ವರಗಳ ಸಂಯೋಜನೆಯಂತೆ ನನ್ನ ಬದುಕು.'

ತಮ್ಮ ಬದುಕಿನ ಹೋರಾಟದ ಸಮಗ್ರತೆಯನ್ನು ಹೀಗೆ ಒಂದು ಸ್ವರಮೇಳದಂತೆ ಕಲ್ಪಿಸಿಕೊಂಡಿದ್ದ ಗಾಂಧಿ ಅವರಿಗೆ ಅಸ್ಪೃಶ್ಯತಾ ನಿವಾರಣೆಗೆಂದೇ ಪ್ರತ್ಯೇಕ ಸತ್ಯಾಗ್ರಹವನ್ನೇಕೆ ರೂಪಿಸುವುದಿಲ್ಲ ಎಂಬ ಅಂಬೇಡ್ಕರ್ ಅವರ ಪ್ರಶ್ನೆ ಅನುಚಿತವಾಗಿಯೂ, ಅಸಂಗತವಾಗಿಯೂ ಕಂಡಿರಬಹುದು. ಚೌರಿಚೌರಾದ ಹಿಂಸಾಚಾರದ ನಂತರ ಸವಿನಯ ಕಾನೂನುಭಂಗವನ್ನು ಪ್ರತಿಪಾದಿಸುವ ತಮ್ಮ ಸತ್ಯಾಗ್ರಹದ ಮೀಮಾಂಸೆಯನ್ನು ಸಮಾಜ ಇನ್ನೂ ಅರ್ಥಮಾಡಿಕೊಂಡಿಲ್ಲವೆಂಬ ಅರಿವಿನಲ್ಲಿ ತಮ್ಮ ಅಸಹಕಾರ ಸತ್ಯಾಗ್ರಹದ ಕರೆಯನ್ನು ಹಿಂಪಡೆದು ಅದನ್ನು ಅರ್ಥ ಮಾಡಿಸುವುದರ ಭಾಗವಾಗಿಯೇ ಅದಕ್ಕೆ ಪೂರಕವಾದ ಹೊಸ ಸಾಮಾಜಿಕ ಆದ್ಯತೆಗಳನ್ನು ನಿರೂಪಿಸುವ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡದ್ದನ್ನೂ, ಅವುಗಳಲ್ಲಿ ಅಸ್ಪೃಶ್ಯತೆಯ ನಿವಾರಣೆಗೆ ಸಂಬಂಧಿಸಿದ ಕಾರ್ಯಕ್ರಮಗಳು ಹೆಚ್ಚಿನ ಮಹತ್ವ ಪಡೆದಿದ್ದವೆಂಬುದನ್ನೂ ನಾವು ಇಲ್ಲಿ ಗಮನಿಸದಿರಲಾಗದು.

ಈಗ ಗಾಂಧಿಯವರ ಈ ಚಿಂತನೆಗಳನ್ನು ಕುರಿತಂತೆ ಈ ವಿಷಯವಾಗಿ ಅವರೊಂದಿಗೆ ನಿರಂತರ ಸಂಘರ್ಷ-ಸಂವಾದಗಳಲ್ಲಿ ತೊಡಗಿದ್ದ ಡಾ. ಅಂಬೇಡ್ಕರ್ ಅವರ ವಿಮರ್ಶೆಯನ್ನು ನೋಡೋಣ. ಇದರ ಸಾರಸರ್ವಸ್ವ ನಮಗೆ ದೊರೆಯುವುದು ಅಂಬೇಡ್ಕರ್ ಅವರ 'ಜಾತಿ ವಿನಾಶ' ಪ್ರಬಂಧಕ್ಕೆ ತಮ್ಮ 'ಹರಿಜನ' ಪತ್ರಿಕೆಯಲ್ಲಿ ಗಾಂಧಿ ಬರೆದ ಪ್ರತಿಕ್ರಿಯೆ ಮತ್ತು ಆ ಪ್ರತಿಕ್ರಿಯೆಗೆ ಅಂಬೇಡ್ಕರ್ ಅವರು ನೀಡಿದ ಉತ್ತರಗಳಲ್ಲಿ. ಆರ್ಯ ಸಮಾಜದ ಆಲೋಚನೆಗಳಿಂದ ತೀವ್ರವಾಗಿ ಪ್ರಭಾವಿತವಾಗಿದ್ದ ಲಾಹೋರ್‌ನ ಜಾತ್ ಪಾತ್ ತೋಡಕ್ ಮಂಡಲ್ (ಜಾತಿ ಪಾತಿ ಒಡೆಯುವ ಮಂಡಲ) ೧೯೩೬ರ ಮೇನಲ್ಲಿ ಆಯೋಜಿಸಲು ಉದ್ದೇಶಿಸಿದ್ದ ಸಮ್ಮೇಳನವೊಂದರ ಸರ್ವಾಧ್ಯಕ್ಷತೆಗೆ ಮಂಡಲದ ಪದಾಧಿಕಾರಿಗಳು ಅಂಬೇಡ್ಕರ್ ಅವರನ್ನು ಆಹ್ವಾನಿಸಿದ್ದರು ಮತ್ತು ಆ ಆಹ್ವಾನವನ್ನು ಅಂಬೇಡ್ಕರ್ ಒಪ್ಪಿಕೊಂಡಿದ್ದರು. ಆದರೆ ಅಂಬೇಡ್ಕರ್ ಅವರು ಇದಕ್ಕಾಗಿ ತಯಾರಿಸಿದ್ದ ಭಾಷಣದಲ್ಲಿನ 'ಇದು ಹಿಂದೂವಾಗಿ ನನ್ನ ಕೊನೆಯ ಭಾಷಣ' ಎಂಬ ವಾಕ್ಯವನ್ನು ತೆಗೆಯಬೇಕೆಂದು ಮಂಡಲವು ಮಾಡಿದ ಕೋರಿಕೆಯನ್ನು ಅಂಬೇಡ್ಕರ್ ಒಪ್ಪದಿದ್ದಾಗ ಅದು ಆ ಸಮ್ಮೇಳನವನ್ನು ರದ್ದುಪಡಿಸಿತು. ಆದರೆ 'ಜಾತಿ ವಿನಾಶ' ಎಂದು ಮುಂದೆ ಪ್ರಸಿದ್ಧವಾದ ಆ ಭಾಷಣವನ್ನು ಅಂಬೇಡ್ಕರ್ ತಾವೇ ಪ್ರಕಟಿಸಿ ಸಾರ್ವಜನಿಕವಾಗಿ ಬಿಡುಗಡೆ ಮಾಡಿದರು. ಅಂಬೇಡ್ಕರ್ ಸಾರ್ವಜನಿಕ ಜೀವನ ಪ್ರವೇಶಿದ್ದಾಗಿನಿಂದ ಅವರೊಂದಿಗೆ ನಿರಂತರ ಒಂದಲ್ಲ ಒಂದು ರೂಪದ ಸಂವಾದದಲ್ಲಿ ತೊಡಗಿದ್ದ ಗಾಂಧಿ ಈ ಪ್ರಬಂಧವನ್ನೂ ಗಮನಿಸಿ ಅದನ್ನು ತಮ್ಮ 'ಹರಿಜನ' ಪತ್ರಿಕೆಯ ೧೯೩೬ರ ಜುಲೈ ೧೧ರ ಸಂಚಿಕೆಯಲ್ಲಿ ಪ್ರಕಟಸಿದ್ದಲ್ಲದೆ ಅದಕ್ಕೊಂದು ಪ್ರತಿಕ್ರಿಯೆಯನ್ನೂ ಬರೆದರು.

ಈ ಪ್ರತಿಕ್ರಿಯೆಯಲ್ಲಿ ಗಾಂಧಿ ಸವರ್ಣ ಹಿಂದೂಗಳಿಂದ ಅಮಾನವೀಯವಾದ ಅವಮಾನ-ದೌರ್ಜನ್ಯಗಳನ್ನು ಪಾರಂಪರಿಕವಾಗಿ ಅನುಭವಿಸಿಕೊಂಡು ಬರುತ್ತಿರುವ ಸಮುದಾಯಕ್ಕೆ ಸೇರಿದ ಅಂಬೇಡ್ಕರ್ ಅವರ ಈ ಪ್ರಬಂಧವನ್ನು ಯಾವ ಸುಧಾಕರನೂ ಉದಾಸೀನ ಮಾಡುವಂತಿಲ್ಲ ಎನ್ನುತ್ತಾರಲ್ಲದೆ, ಸಂಪ್ರದಾಯವಾದಿಗಳು ಇದನ್ನು ಓದಿದರೆ ಪ್ರಯೋಜನ ಪಡೆಯುವರು ಎಂದು ಹೇಳುತ್ತಾರೆ. ಇದು ಭಾರತದ ಎಲ್ಲ ಭಾಷೆಗಳಿಗೂ ಅನುವಾದವಾಗಬೇಕು ಮತ್ತು ಇದರ ಬೆಲೆ ಈಗಿರುವ ಹನ್ನೆರಡಾಣೆಗಿಂತ ಕಡಿಮೆಯಾಗ ಬೇಕು; ಎರಡಾಣೆಗೆ, ಹೆಚ್ಚೆಂದರೆ ನಾಲ್ಕಾಣೆಗೆ ಇದು ಸಾಮಾನ್ಯ ಜನರಿಗೆ ದೊರಕುವಂತಾಗ ಬೇಕು ಎಂದೂ ಅವರು ಸೂಚಿಸುತ್ತಾರೆ. ಆದರೆ ಅಂಬೇಡ್ಕರ್ ಜಾತಿ ಕುರಿತು ಮಂಡಿಸಿರುವ ವಿಚಾರಗಳನ್ನಾಗಲೀ ಅದರ ಆಧಾರದ ಮೇಲೆ ಅವರು ತಮ್ಮ ಅನುಯಾಯಿಗಳೊಂದಿಗೆ ಹಿಂದೂ ಧರ್ಮವನ್ನು-ಆ ಮೂಲಕ

ಒಂದು ಪರಂಪರೆಯ ವಾರಸುದಾರಿಕೆಯನ್ನು–ತೊರೆದು ಹೋಗುವ ನಿರ್ಧಾರವನ್ನು ಸಮರ್ಥಿಸಲು ಮಂಡಿಸಿರುವ ವಾದವನ್ನಾಗಲೀ ಗಾಂಧಿ ಒಪ್ಪುವುದಿಲ್ಲ.

ಜಾತಿಗೂ ಧರ್ಮಕ್ಕೂ ಸಂಬಂಧವಿಲ್ಲ:

ಹಿಂದೂ ಧರ್ಮ ಶಾಸ್ತ್ರ ಧರ್ಮವಲ್ಲ; ಸಾಧು–ಸಂತರ ಧರ್ಮ

ಗಾಂಧಿ ಪ್ರಕಾರ ಜಾತಿಗೂ ಧರ್ಮಕ್ಕೂ ಸಂಬಂಧವಿಲ್ಲ. ಯಾವುದೋ ಕಾಲದ ಶಾಸ್ತ್ರಗಳ ಆಧಾರದ ಮೇಲೆ ಜಾತಿಗೆ ಧರ್ಮದ ಸಮ್ಮತಿ ಇದೆ ಎಂಬ ವಾದ ಮನುಷ್ಯನ ವಿವೇಚನಾ ಶಕ್ತಿಗೆ ವಿರುದ್ಧವಾದದ್ದು. ಹಿಂದೂ ಧರ್ಮದ ಶಾಸ್ತ್ರಗ್ರಂಥಗಳೆಂದು ಹೇಳಲಾಗುವ ವೇದಗಳು, ಉಪನಿಷತ್ತುಗಳು, ಪುರಾಣಗಳು, ರಾಮಾಯಣ–ಮಹಾಭಾರತ ಗಳು, ಶೃತಿ ಮತ್ತು ಸ್ಮೃತಿಗಳು ಒಂದೇ ಕಾಲದಲ್ಲಿ ರಚಿತವಾದುವಲ್ಲ. ಅವು ಒಂದಕ್ಕೊಂದರ ಕಾಲಾನುಕಾಲದ ವಿಮರ್ಶೆಗಳಾಗಿ ಬಂದಿವೆ. ಹಾಗಾಗಿ ಅವುಗಲ್ಲಿರುವುದೆಲ್ಲವನ್ನೂ ವಿವೇಚನೆ–ವಿಮರ್ಶೆಯಿಲ್ಲದೆ ಧಾರ್ಮಿಕ ಸತ್ಯಗಳೆಂದು ಒಪ್ಪುವ ಅಗತ್ಯವಿಲ್ಲ. ಬರೆದಿಟ್ಟ ಅಥವಾ ಮುದ್ರಿತವಾದುದೆಲ್ಲವೂ ಪವಿತ್ರವೂ ಅಲ್ಲ, ಮಾನ್ಯವೂ ಅಲ್ಲ. ವಿಶೇಷವಾಗಿ ಸ್ಮೃತಿಗಳಲ್ಲಿರುವುದನ್ನು ಎಲ್ಲ ಕಾಲಕ್ಕೂ ಅನ್ವಯವಾಗುವುದೆಂದು ಒಪ್ಪಲಾಗುವುದಿಲ್ಲ ಎಂದೂ, ಧರ್ಮಗ್ರಂಥಗಳ ಪಟ್ಟಿ ಎಲ್ಲೂ ಸ್ಥಗಿತಗೊಳ್ಳದೆ ಅನಂತವಾಗಿ ಮುಂದುವರೆಯುತ್ತದೆ ಎಂದೂ ಹೇಳುತ್ತಾ, ಈ ಮೊದಲು ನಾನು ಅವರು ಮಂಡಿಸಿದರೆಂದು ಹೇಳುವ ಹಿಂದೂ ಧರ್ಮದ ಮರುನಿರೂಪಣೆಯ ಮುಖ್ಯ ಅಂಶಗಳನ್ನು ತಮ್ಮ ವಾದಕ್ಕೆ ಬಳಸಿಕೊಳ್ಳುತ್ತಾ ಹೋಗುತ್ತಾರೆ. (ಇದನ್ನೇ ಕುವೆಂಪು ಗಾಂಧಿ ಪ್ರಭಾವದಲ್ಲಿ 'ಯಾವ ಶಾಸ್ತ್ರ ಏನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?' ಎಂದು ತಮ್ಮೊಂದು ಪದ್ಯದಲ್ಲಿ 'ಅಂದಿನಾ ಋಷಿಗಳೂ ಮಾನವರು ನಮ್ಮಂತೆ... ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ... ಕಾಲಕ್ಕೆ ತಕ್ಕಂತೆ ದೇಶಕ್ಕೆ ತಕ್ಕಂತೆ ನಮ್ಮ ಹೃದಯವೇ ಶ್ರೀಧರ್ಮ ಸೂತ್ರ!' ಎಂದು ಘೋಷಿಸಿದ್ದು!)

ಧರ್ಮದ ಹೆಸರಿನಲ್ಲಿ ಯಾರೋ ಕೆಲವರು ನಡೆಸಿದ ದೌರ್ಜನ್ಯವನ್ನು ಮತ್ತು ಕೆಲ ಕೆಟ್ಟ ಉದಾಹರಣೆಗಳ ಹೊಣೆಯನ್ನು ಇಡೀ ಧರ್ಮದ ಮೇಲೆ ಹೊರಿಸಿ ಧರ್ಮ ಬಿಟ್ಟು ಹೊರಹೋಗುವುದು ಉಚಿತವಲ್ಲ. ಇಡೀ ಅಸ್ಪೃಶ್ಯ ಸಮುದಾಯ ಇದನ್ನು ಒಪ್ಪಲಾರದು. ಅಂಬೇಡ್ಕರ್‌ರದ್ದು ಅಲ್ಪಸಂಖ್ಯಾತ ಅಭಿಪ್ರಾಯ. ಹಿಂದೂ ಧರ್ಮವನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳಬಯಸುವ ಹಲವರು ಅಸ್ಪೃಶ್ಯರಲ್ಲಿದ್ದಾರೆ ಎಂದು ರಾವ್ ಬಹಾದುರ್ ಎಂ.ಸಿ. ರಾಜಾ ಮತ್ತು ದಿವಾನ್

ಬಹಾದುರ್ ಶ್ರೀನಿವಾಸನ್ ಅವರ ಉದಾಹರಣೆಗಳನ್ನು ನೀಡುತ್ತಾರೆ. ಹಿಂದೂ ಧರ್ಮ ಬೆಳೆದಿರುವುದು ಶಾಸ್ತ್ರಗ್ರಂಥಗಳ ನೀತಿ-ನಿಯಮಗಳ ಆಧಾರದ ಮೇಲಲ್ಲ. ಬದಲಿಗೆ, ಕಾಲಾನುಕಾಲದಲ್ಲಿ ಬಾಳಿ ಹೋದ ಸಮಾಜ ಸುಧಾರಕ ಸಂತರು ಅವುಗಳ ಬಗ್ಗೆ ಮಾಡಿದ ವ್ಯಾಖ್ಯಾನಗಳು ಮತ್ತು ಉಪದೇಶಗಳ ಮೂಲಕ ಎಂದು ಅವರು ಜ್ಞಾನದೇವ, ಏಕನಾಥ, ತುಕಾರಾಮ, ಕಬೀರ, ಚೈತನ್ಯ, ತಿರುವಳ್ಳುವರ್ ಮುಂತಾದವರ ಉದಾಹರಣೆಗಳನ್ನು ನೀಡುತ್ತಾರೆ ಮತ್ತು ಇಂತಹ ಮಹಾತ್ಮರು ಹಾಗೂ ರಾಜಾರಾಂ ಮೋಹನ ರಾಯ್, ಮಹರ್ಷಿ ದೇವೇಂದ್ರನಾಥ ಟ್ಯಾಗೋರ್, ರಾಮಕೃಷ್ಣ ಪರಮಹಂಸ, ವಿವೇಕಾನಂದರಂಥ ಮಹಾಪುರುಷರಿಂದ ಪ್ರತಿಪಾದಿಸಲ್ಪಟ್ಟ ಧರ್ಮವು ಬರೀ ದೋಷಗಳಿಂದ ತುಂಬಿ ತಿರಸ್ಕರಣೀಯವಾಗಿದೆ ಎಂದು ನಂಬಲಾಗದು ಎನ್ನುತ್ತಾರೆ ಗಾಂಧಿ. ಹೀಗೆ ಗಾಂಧಿ ಒಂದರ್ಥದಲ್ಲಿ ಓರ್ವ ಶ್ರಮಣರಂತೆ ಹಿಂದೂ ಧರ್ಮವನ್ನು ಒಂದು ಶ್ರಮಣ ಧರ್ಮವನ್ನಾಗಿ ಪ್ರಸ್ತುತಪಡಿಸಲು ಯತ್ನಿಸುತ್ತಾರೆ.

ಇದಕ್ಕೆ ಅಂಬೇಡ್ಕರ್ ಒಂದು ವಿವರವಾದ-ದೀರ್ಘ-ಉತ್ತರ ನೀಡುತ್ತಾರೆ. ಗಾಂಧಿಯವರ ವಾದದ ಪ್ರತಿ ಅಂಶವನ್ನೂ ಎತ್ತಿಕೊಂಡು ಅವರ ವಾದವನ್ನು ತಿರಸ್ಕರಿಸುತ್ತಾರೆ. ಈ ತಿರಸ್ಕಾರದ ಭಾಗವಾಗಿ ಅವರು ಗಾಂಧಿಯನ್ನು ಆತ್ಮದ್ರೋಹಿಯೆಂದೂ, ಯೋಚನಾ ಶಕ್ತಿಯೇ ಇಲ್ಲದವರೆಂದೂ, ಕೊನೆಗೆ ಹಿಂದೂ ಧರ್ಮದ ಶತ್ರುವೆಂದೂ ಟೀಕಿಸುತ್ತಾರೆ. ಅಂಬೇಡ್ಕರ್ ಗಾಂಧಿಯವರ ವಾದವನ್ನು ಸಾರಾಸಗಟಾಗಿ ತಿರಸ್ಕರಿಸಲು ಇರಬಹುದಾದ ಮುಖ್ಯ ಕಾರಣಗಳನ್ನಷ್ಟೇ ಇಲ್ಲಿ ಸೂಚಿಸಬಯಸುವೆ. ಮೊದಲಾಗಿ ವರ್ಣ ಧರ್ಮ ಮತ್ತು ಜಾತಿ ಪದ್ಧತಿ ಕುರಿತಂತೆ ಗಾಂಧಿಯವರ ವಿಚಾರಗಳು ವಿಕಾಸ ವಾಗುತ್ತಾ ಬಂದ ಬಗೆಯನ್ನು ಮತ್ತು ಅದರ ವಿವರಗಳನ್ನು ಅಂಬೇಡ್ಕರ್ ಗಮನಿಸುತ್ತಾ ಬಂದ ಯಾವ ಸೂಚನೆಗಳೂ ಅವರ ಉತ್ತರದಲ್ಲಿ ಕಾಣುವುದಿಲ್ಲ. ಮುಖ್ಯವಾಗಿ ಗಾಂಧಿ ಹಿಂದೂ ಧರ್ಮವನ್ನು ಬ್ರಾಹ್ಮಣ ಕೇಂದ್ರದಿಂದ ಬಿಡಿಸಿ ಅದನ್ನು ಸಂತ ಪರಂಪರೆಯೊಂದಿಗೆ ಜೋಡಿಸುತ್ತಾ ಜನಸಾಮಾನ್ಯರ ಧರ್ಮವನ್ನಾಗಿ ಪರಿವರ್ತಿಸಲು ಕೈಗೊಂಡಿದ್ದ ಕ್ರಮಗಳನ್ನು ಅವರು ಗಮನಿಸುವ ಗೋಜಿಗೇ ಹೋದಂತಿಲ್ಲ. ಇದಕ್ಕೆ ಮುಖ್ಯ ಕಾರಣ, ಗಾಂಧಿ ಪೂರ್ವ-ಪಶ್ಚಿಮಗಳೆರಡರ ಸತ್ವವನ್ನೂ ಹೀರಿಕೊಂಡ ವಿಶಿಷ್ಟ ಅಧ್ಯಾತ್ಮಿಕ ವ್ಯಕ್ತಿಯಾಗಿ ಬೆಳೆದಿದ್ದರೆ, ಅಸ್ಪೃಶ್ಯತೆಯ ದಳ್ಳುರಿಯಲ್ಲಿ ಬೆಂದ ಅಂಬೇಡ್ಕರ್ ಪಶ್ಚಿಮದ ಆಧುನಿಕತೆಯಲ್ಲಿ ಅದಕ್ಕೆ ಪರಿಹಾರ ಕಂಡುಕೊಂಡವರಂತೆ ಅದರ ಎರಕದಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡವರಾಗಿದ್ದರು.

ಹಾಗಾಗಿಯೇ, ಅಮೆರಿಕಾದಲ್ಲಿ ವಿದ್ಯಾರ್ಥಿಯಾಗಿ ತಮ್ಮ ಹೊಸ ವ್ಯಕ್ತಿತ್ವದ ತಳಹದಿಯನ್ನು ಕಂಡುಕೊಳ್ಳುವುದರ ಭಾಗವಾಗಿ ಅಲ್ಲಿನ ಸಮಾಜದಿಂದ ಹೊಸ ಲೋಕದೃಷ್ಟಿಯೊಂದನ್ನು ಬೆಳೆಸಿಕೊಂಡ ಅಂಬೇಡ್ಕರ್, ಹಿಂದೂ ಧರ್ಮವನ್ನು ಕ್ರಿಶ್ಚಿಯನ್(ಪ್ರೊಟೆಸ್ಟಂಟ್) ಧರ್ಮದ ಮಾದರಿಯಲ್ಲಿ ಗ್ರಹಿಸುವ–ಅಂದರೆ, ಒಂದು ಏಕಾಧಿಕಾರ ಕೇಂದ್ರಿತವಾದ, ಏಕರೂಪಿಯಾದ ಸುವ್ಯವಸ್ಥಿತ, ಸುಯೋಜಿತ ಶಾಸ್ತ್ರೀಯ ಧರ್ಮವಾಗಿ ಮಾತ್ರ ಕಾಣುವ–ನಿರ್ಬಂಧಕ್ಕೆ ಒಳಗಾಗಿದ್ದರು. ಅವರಿಗೆ ಧರ್ಮವೊಂದು ಚೈತನ್ಯಶೀಲವಾಗಿದ್ದುಕೊಂಡು ಸದಾ ಬೆಳೆಯುತ್ತಾ ಬದಲಾಗುತ್ತಾ ಹೋಗಬಹುದೆಂದು ಮತ್ತು ಗಾಂಧಿ ತಮಗೆದುರಾದ ಪ್ರಾಣಾಪಾಯಗಳನ್ನೂ ಲೆಕ್ಕಿಸದೆ ಅದನ್ನು ಹಾಗೆ ಆಧುನೀಕರಿಸುತ್ತಿದ್ದಾರೆಂಬ ಅರಿವೇ ಉಂಟಾಗದ ಮಟ್ಟಿಗೆ ಅವರು ಪಶ್ಚಿಮದ ಆಧುನಿಕತೆಯ ಶಿಶುವಾಗಿಬಿಟ್ಟಿದ್ದರೆನಿಸುತ್ತದೆ. ಅವರು ಹಿಂದೂ ಧರ್ಮದ ಚೈತನ್ಯಶೀಲತೆಯ ಮೂಲ ಸಂತ ಪರಂಪರೆಯದ್ದು ಎನ್ನುವ ಗಾಂಧಿಯವರ ಮಾತಿಗೆ ನೀಡುವ ಉತ್ತರ ನಮ್ಮ ವಚನ ಪರಂಪರೆಯನ್ನು ಎಸ್.ಎನ್. ಬಾಲಗಂಗಾಧರ(ರಾವ್)ರಂತಹವರು ವ್ಯಾಖ್ಯಾನಿಸುವ ಪರಿಯನ್ನು ಹೋಲುತ್ತದೆ ಎಂಬುದು ಆಶ್ಚರ್ಯವಾದರೂ ನಿಜದ ಸಂಗತಿಯಾಗಿದೆ. ಬಾಲಗಂಗಾಧರರು ವಚನಗಳನ್ನು ಹೇಗೆ ಜಾತಿ ಸಂಬಂಧಿಯಾಗಿ ನೋಡದೆ ಅಧ್ಯಾತ್ಮಿಕ ನೆಲೆಯಲ್ಲಿ ಮಾತ್ರ ನೋಡಿ ಅರ್ಥೈಸಿಕೊಳ್ಳಬೇಕೆಂದು ಹೇಳುತ್ತಾರೋ ಹಾಗೇ ಅಂಬೇಡ್ಕರರು ಹಿಂದೂ ಸಮಾಜದ ಸಂತ ಪರಂಪರೆಯನ್ನು ಸಾಮಾಜಿಕವಾಗಿ ನೋಡದೆ ಅಧ್ಯಾತ್ಮಿಕ ನೆಲೆಯಲ್ಲಿ ಮಾತ್ರ ನೋಡಬೇಕು ಎನ್ನುತ್ತಾರೆ.

ಜೊತೆಗೆ ಇನ್ನೊಂದು ಮಾತನ್ನೂ ಇಲ್ಲಿ ಹೇಳಬೇಕು. ಅಂಬೇಡ್ಕರ್ ಮೆಚ್ಚಿಕೊಂಡು, ತನ್ನ ಜನರ ಅಂತಿಮ ಬಿಡುಗಡೆಗೆ ಒಂದು ಸಮರ್ಪಕವಾದ ಮೌಲ್ಯ ವ್ಯವಸ್ಥೆ ಎಂದು ನೆಚ್ಚಿಕೊಂಡಿದ್ದ ಪಶ್ಚಿಮದ ಆಧುನಿಕತೆಯ ಹಿಂದಿನ ಚಾಲನಾ ಶಕ್ತಿ ಇದ್ದುದು ಅದರ ನಾಗರಿಕ ಹಕ್ಕುಗಳ ಪ್ರತಿಪಾದನೆಯಲ್ಲಿ; ಮತ್ತೆ ಅದರ ಹಿಂದಿದ್ದುದು ಆಧುನಿಕಪೂರ್ವ ಮೌಲ್ಯ ವ್ಯವಸ್ಥೆಯು ಈ ನಾಗರೀಕ ಹಕ್ಕುಗಳನ್ನೇ ದಮನ ಮಾಡಿಟ್ಟಿದ್ದ ಶೋಷಕ ವ್ಯವಸ್ಥೆ ಎಂಬ ಸಾರಾಸಗಟಾದ ನಂಬಿಕೆ. ಆದರೆ ಆಧುನಿಕ ನಾಗರೀಕತೆಯನ್ನು ನಿಷ್ಠುರ ವಿಮರ್ಶೆಗೆ ಒಳಪಡಿಸಿ ಅದಕ್ಕೆ ಪ್ರತಿಯಾಗಿ ಮತ್ತು ಹಕ್ಕುಗಳೇನಿದ್ದರೂ ಕರ್ತವ್ಯ (ಧರ್ಮ) ಪಾಲನೆಯ ಜೊತೆಗೇ ಹುಟ್ಟುವಂಥವು ಎಂದು ಪ್ರತಿಪಾದಿಸುವ ಅಧ್ಯಾತ್ಮಿಕತೆಯನ್ನು ಆಧರಿಸಿದ ಹೊಸ ಸಭ್ಯತೆಯನ್ನು ಕಟ್ಟಲೆಳಿಸಿದ್ದ ಗಾಂಧಿಯನ್ನು ಅಂಬೇಡ್ಕರ್ ಅವರು, ತಮ್ಮ ಕಲ್ಪನೆಯ ಆಧುನಿಕಪೂರ್ವ ವ್ಯವಸ್ಥೆಯ ಪ್ರತಿನಿಧಿಯಾಗಿ ನೋಡುವ ಅತಿ ಸರಳೀಕೃತ ನೋಟಕ್ಕೆ ಈಡಾದರೇನೋ ಎಂಬ ಅನುಮಾನವೂ ಉಂಟಾಗದಿರದು. ಈ ಎಲ್ಲ ಕಾರಣಗಳಿಂದಾಗಿಯೇ ಅಂಬೇಡ್ಕರ್ ಗಾಂಧಿಯನ್ನು

ಒಳಹೊಕ್ಕು ಮತ್ತು ಅವರ ವ್ಯಕ್ತಿತ್ವದ ವಿಕಾಸಶೀಲತೆಯ ವಿವರಗಳೊಂದಿಗೆ ಅರ್ಥ ಮಾಡಿಕೊಳ್ಳಲಾಗಲಿಲ್ಲವೆಂದು ಕಾಣುತ್ತದೆ.

ಹಾಗಾಗಿಯೇ ಗಾಂಧಿ ಹೇಗೆ ವರ್ಣಪದ್ಧತಿಯನ್ನು ಜಾತಿ ಪದ್ಧತಿಯಿಂದ ಬೇರ್ಪಡಿಸಿ ನಿರೂಪಿಸಲು ಸಾಧ್ಯವಾಯಿತು ಮತ್ತು ಹೇಗೆ ಅಸ್ಪೃಶ್ಯತಾ ನಿವಾರಣೆಯ ಮೇಲೆ ಗಮನ ಕೇಂದ್ರೀಕರಿಸುವ ಮೂಲಕ ಜಾತಿ ಪದ್ಧತಿಯ ಸೊಂಟ ಮುರಿಯಬಹುದು ಎಂಬ ಅವರ ಸೂಕ್ಷ್ಮ ತರ್ಕವನ್ನು ಅಂಬೇಡ್ಕರ್ ಅರ್ಥ ಮಾಡಿಕೊಳ್ಳದೇ ಹೋದರು ಎಂದೆನಿಸುತ್ತದೆ. ಈ ಕಾರಣದಿಂದಾಗಿಯೇ ಅವರು, ಈಗ ಭಾರತೀಯರೆಲ್ಲರೂ ಶೂದ್ರರೇ ಮತ್ತು ಬ್ರಾಹ್ಮಣನಾಗಿ ಇಂದು ಹುಟ್ಟಿದವನ ಧರ್ಮ ಎಂದರೆ ಚರಕದಲ್ಲಿ ನೂಲುವುದು ಎಂದ ಗಾಂಧಿಯನ್ನು, ಸ್ವತಃ ಬನಿಯಾ ಆಗಿದ್ದರೂ ಅವರೇಕೆ ವಕೀಲಿಕೆಗೆ ಬಂದರು? ಅವರ ಮಗನನ್ನು ಅಂತರ್‌ಜಾತಿ ವಿವಾಹವಾಗಲು, ಪತ್ರಿಕಾವೃತ್ತಿ ಕೈಗೊಳ್ಳಲು ಅವಕಾಶ ನೀಡಿದರು ಎಂಬ ಅಸಂಗತವಾದ ವೈಯಕ್ತಿಕ ಪ್ರಶ್ನೆಗಳನ್ನು ಕೇಳುತ್ತಾರೆ. ಜೊತೆಗೆ, ವರ್ಣಧರ್ಮದ ಪ್ರಕಾರ ಪೂರ್ವಜರ ವೃತ್ತಿಯನ್ನು ಅನುಸರಿಸಬೇಕೆಂಬ ಗಾಂಧಿಯವರ ಮಾತನ್ನು ಗೇಲಿ ಮಾಡುತ್ತಾ, ಗಾಂಧಿ ವರ್ಣಗಳ ಸೇವೆಯನ್ನು ವಿಂಗಡಿಸಿರುವ ಸ್ವರೂಪವನ್ನೇ–ಅದರ ನೈತಿಕ ಕೇಂದ್ರವನ್ನೇ– ಗಮನಿಸದವರಂತೆ, ಹಾಗಾದರೆ ಸೂಳೆಯರು ಸೂಳೆಗಾರಿಕೆಯನ್ನೂ, ತಲೆ ಹಿಡುಕರು ತಲೆಹಿಡುಕತನವನ್ನೂ ಮುಂದುವರೆಸಬೇಕೆ? ಎಂದು ಕೇಳುವ ಮೂಲಕ ತಮ್ಮ ವಾದಸರಣಿಯ ಘನತೆಗೆ ತಾವೇ ಭಂಗ ತಂದುಕೊಳ್ಳುತ್ತಾರೆ.

ಅಂಬೇಡ್ಕರ್ ಅವರನ್ನು ಗಾಂಧಿ ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು ಮತ್ತು ಅವರತ್ತ ಸರಿಯಲು ಮಾಡಿದ ಪ್ರಯತ್ನದ ಹತ್ತನೇ ಒಂದು ಭಾಗದಷ್ಟನ್ನಾದರೂ ಅಂಬೇಡ್ಕರ್ ಗಾಂಧಿಯನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು, ಅವರತ್ತ ಸರಿಯಲು ಯತ್ನಿಸದಿದ್ದುದು ಆಧುನಿಕ ಭಾರತದ ಚರಿತ್ರೆಯ ಒಳ ಚಲನೆಗಳನ್ನು ನಿಯಂತ್ರಿಸಿದ ಹಲವು ನೆಲೆಗಳ ಸ್ಮೃತಿ–ವಿಸ್ಮೃತಿಗಳನ್ನೂ ಅದರ ನಿಗೂಢ ದುರಂತ ಪ್ರಜ್ಞೆಯನ್ನೂ ಸೂಚಿಸುತ್ತದೆ ಎಂದಷ್ಟೇ ಸದ್ಯಕ್ಕೆ ಹೇಳಬಹುದು.

●

ತಿಂಗಳ ಕವನಕ್ಕೊಂದು ಟಿಪ್ಪಣಿ

ಡಿಸೆಂಬರ್ ಮಹಾತ್ಮಾ ಯೇಸುಕ್ರಿಸ್ತನ ನೆನಪನ್ನು ಹೊತ್ತುತರುತ್ತದೆ. ಪ್ರಪಂಚ ಕಂಡ ಶಾಂತಿದೂತರಲ್ಲಿ ಆದ್ಯನಾದ ಯೇಸು, ಅತ್ಯಂತ ಕಠಿಣ ಸನ್ನಿವೇಶದಲ್ಲಿ ಜನಿಸಿ, ಮನುಷ್ಯಲೋಕದ ವಿಕಾರಗಳೆಲ್ಲವನ್ನೂ ನೋಡುತ್ತಲೇ ಬೆಳೆದ; ಮೂವತ್ತನೆಯ ವಯಸ್ಸಿನಲ್ಲಿ ಧರ್ಮದೀಕ್ಷೆಯನ್ನು ಪಡೆದು, ಈ ಭೂಮಿಯ ಬದುಕನ್ನು ಸುಧಾರಿಸಲು ಶ್ರಮಿಸಿದ; ಶೋಷಿತರನ್ನು ಮೇಲೆತ್ತಲು ಹೋರಾಡಿದ; ಸಮಾಜದಲ್ಲಿ ಪತಿತರೆನ್ನಿಸಿಕೊಂಡವನ್ನು ಕರುಣೆಯಿಂದ ಉದ್ಧರಿಸಿದ; ಜನಸಾಮಾನ್ಯರ ಪಾಲಿಗೆ 'ದೈವಪುತ್ರ'ನಾದ. ಆದರೆ ಯಹೂದ್ಯ ಧರ್ಮದ ಮುಖಂಡರಿಗೆ ಆತನನ್ನು ಸಹಿಸಿಕೊಳ್ಳಲಾಗಲಿಲ್ಲ. ಆತನನ್ನು ಧರ್ಮದ್ರೋಹಿಯೆಂದು ಆಪಾದಿಸಿ, ವಿಚಾರಣೆಯ ನಾಟಕ ನಡೆಸಿ, ಮರಣದಂಡನೆಯನ್ನು ವಿಧಿಸಿದರು. ಗೊಲ್ಗೊಥಾ ಎಂಬಲ್ಲಿ ಇಬ್ಬರು ಕಳ್ಳರ ನಡುವೆ ಶಿಲುಬೆಗೆ ಏರಿದ ಕರುಣಾಳು ಯೇಸು ಕ್ರೌರ್ಯಕ್ಕೆ ಒಳಗಾಗಿ ಹುತಾತ್ಮನಾದ.

ಎಂ.ಎನ್. ಜೈಪ್ರಕಾಶ್‌ರ ಈ ಕವಿತಾಗುಚ್ಛ ಯೇಸುಕ್ರಿಸ್ತನ ಕೊನೆಯ ಕ್ಷಣಗಳ ನೆನಪಿನಿಂದ ಪ್ರಾರಂಭವಾಗುತ್ತದೆ. ಯೇಸುವನ್ನು ಶಿಲುಬೆಗೇರಿಸಿದ ದಿನ ಒಂದು ಹುಣ್ಣಿಮೆ. ಆದರೆ ಗೊಲ್ಗೊಥಾಕ್ಕೆ ಮಾತ್ರವಲ್ಲ, ಇಡಿಯ ಪ್ರಪಂಚಕ್ಕೆ ಅದು ಬೆಳುದಿಂಗಳ ಪ್ರಶಾಂತ ರಾತ್ರಿಯಾಗಿರಲಿಲ್ಲ; ಕರಾಳ ರಾತ್ರಿಯಾಗಿತ್ತು. ಆ ದಿಗಿಲಿಕ್ಕುವ ನೀರವ ರಾತ್ರಿ ಮನುಕುಲದ ಇತಿಹಾಸದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಲೇ ಇದೆ. ಆದ್ದರಿಂದಲೇ ಅಂದು 'ಒಂಟಿ ಬಾನಾಡಿಯೊಂದು ಎಲ್ಲಿಂದಲೋ ಬಂದು ರೆಕ್ಕೆ ಬಡಿಯುತ್ತಾ ತನ್ನ ಅಳಲನ್ನು ತೋಡಿಕೊಳ್ಳುತ್ತದೆ' ಎನ್ನುತ್ತಾರೆ ಕವಿ.

ಅಸಹನೀಯ ಯಾತನೆಯಲ್ಲೂ ಕರುಣಾಳು ಯೇಸು ತನ್ನನ್ನು ಶಿಲುಬೆಗೇರಿಸಿದವರನ್ನು ಭಗವಂತ ಕ್ಷಮಿಸಲೆಂದು ಬೇಡಿಕೊಂಡನಂತೆ. ಪಾರ್ಥಿವವಾಗಿ ಯೇಸು ಮರೆಯಾಗಿದ್ದರೂ ಮನುಕುಲದ ಮನಸ್ಸಿನಲ್ಲಿ ಚರಾಚರ ಜಗತ್ತಿನಲ್ಲಿ ಸ್ಥಾಯಿಯಾಗಿ ಉಳಿದಿದ್ದಾನೆ. ಆದ್ದರಿಂದಲೇ ಕವಿ ಆತನನ್ನು 'ಹಕ್ಕಿಗೊರಳಲ್ಲಿ ಇಂಪಾಗಿ, ಹೊಳೆಯಲ್ಲಿ ಜುಳುಜುಳು ಹಾಡಾಗಿ... ಮುಗ್ಧ ಕಂಗಳಲ್ಲಿ, ಕೊರಳಿಂದ ಎದೆತನಕ ತೂಗುವ ಬೆಳ್ಳಿ ಕ್ರಾಸುಗಳಲ್ಲಿ ಮಿನುಗುವ ಸಾಕ್ಷಿಪ್ರಜ್ಞೆ'ಯಾಗಿದ್ದಾನೆಂದು ಕೀರ್ತಿಸುತ್ತಾರೆ. ಜಗತ್ತೇ ಹಿಂಸೆಯಿಂದ ತಲ್ಲಣಿಸುತ್ತಿರುವ ಈ ಕಾಲಘಟ್ಟದಲ್ಲಿ ಮನುಜಲೋಕ ಶಾಂತಿದೂತನ ಪುನರವತಾರಕ್ಕೆ ಹಾತೊರೆಯುವಂತಾಗಿದೆ. ಆದರೆ ಅದಕ್ಕೂ ಕಾಲ ಪಕ್ವವಾಗಿಲ್ಲವೇನೋ? ಕವಿತೆ – 'ಬೇಕಲ್ಲವೆ ಎಲ್ಲಕೂ ಮೊದಲು ಕೊಂಚವಾದರೂ ನೀರು ನೆರಳಿರುವ ಮಣ್ಣು – ಮೊಳಕೆಗಾಶಿಸುವ ಬೀಜಕ್ಕೆ ಹಾರೈಸುವ ನೂರಾರು ಕಣ್ಣು?' ಎಂಬ ಪ್ರಶ್ನೋದ್ಗಾರದಲ್ಲಿ ಮುಕ್ತಾಯವಾಗುತ್ತದೆ.

(ಇಪ್ಪತ್ತರ ತರುಣದಲ್ಲಿಯೇ ಈ ಕವಿತೆಯನ್ನು ರಚಿಸಿದ ತೀರ್ಥಹಳ್ಳಿಯ ಪ್ರತಿಭಾವಂತ ಎಂ.ಎನ್. ಜೈಪ್ರಕಾಶ್ ತಮ್ಮ ೩೧ನೆಯ ವಯಸ್ಸಿನಲ್ಲಿ ಸ್ವಪ್ರೇರಣೆಯಿಂದ ಈ ಪ್ರಪಂಚಕ್ಕೆ ವಿದಾಯ ಹೇಳಿದರು. ಪ್ರಸ್ತುತ ಕವಿತೆಯನ್ನು ಅವರ ಮೊದಲ ಸಂಕಲನ 'ಸಾಂಪ್ರತ'ದಿಂದ ಆರಿಸಲಾಗಿದೆ.)

– ಎನ್. ಶ್ರೀನಿವಾಸ ಉಡುಪ

ಸತ್ಯ ಮತ್ತು ಮೌಲ್ಯ

– ಎ. ಸೀ

ಸತ್ಯ ಮತ್ತು ಮೌಲ್ಯ: ಈ ಎರಡು ಮಾತುಗಳು ನನ್ನ ಈ ಬರಹಕ್ಕೆ ಆಧಾರ. ಸತ್ಯ, ವಾಸ್ತವಾಂಶ ಅಥವಾ ಸಂಗತಿ–ಒಂದು; ಮೌಲ್ಯ ಅಥವಾ ಬೆಲೆ ಇನ್ನೊಂದು; ಇಂಗ್ಲೀಷ್‌ನಲ್ಲಿ 'Fact' ಮತ್ತು 'Value' ಎಂಬವಕ್ಕೆ ಸಮಾನವಾಚಕಗಳು. 'ಮೌಲ್ಯ' ಎಂಬುದು ಹಾಗೂ ಹೀಗೂ ತನ್ನ ಸ್ವರೂಪವನ್ನು ನಿರ್ದೇಶಿಸುತ್ತದೆ. ಯಾವುದರದೊ ಬೆಲೆ, ಯಾರದೊ, ಎಷ್ಟೋ, ಏಕೊ–ಎಂಬುದು ಮೌಲ್ಯದ ನಿರ್ದೇಶನ. ಅದರ ನಿರ್ಣಯ ಹೇಗಾಗುತ್ತದೆ? ದರ್ಶನಗಳಲ್ಲಿ ಕೂಡ ಯಾವುದರ ಮೌಲ್ಯ ಎಷ್ಟು, ದೇಶ ವಿದೇಶಗಳಲ್ಲಿ ಯಾವ ವಿಚಾರ ಆ ಬಗೆಗೆ ನಡೆದಿದೆಯೊ ಎಂಬುದೆಲ್ಲ ಸೇರಿದೆ. ಅರ್ಥಶಾಸ್ತ್ರದ ಮೌಲ್ಯವೇ ಅಲ್ಲ; ಜೀವನದ–ಪುರುಷಾರ್ಥಗಳ ಸಂಬಂಧದ್ದು. ಯಥಾರ್ಥ, ವಾಸ್ತವಾಂಶ ಅಥವಾ ಸತ್ಯಸಂಗತಿ (Fact) ಎಂಬ ಮಾತಿನಲ್ಲಿ–ಜಗತ್ತಿನಲ್ಲಿ–ಬೇರೆ ಬೇರೆ ಅರ್ಥದ ಅಂಶಗಳು ಕಲಸಿಕೊಳ್ಳುತ್ತವೆ. ಯಾವ ಯಾವುದು ಇದೆಯೊ ಹಾಗೆಂದು ಜನ ನಂಬುವರೊ–ಸ್ವಂತ ಅನುಭವದಿಂದ ದೊರೆತುದು, ಬೇರೆಯವರಿಗೆ ತಿಳಿದು ನಮ್ಮ ಕಿವಿಗೆ ಬಿದ್ದುದು ಎರಡೂ–ಅದೆಲ್ಲಕ್ಕೂ ವ್ಯಾಪಿಸಿರುವ ಅರ್ಥದ ಮಾತು:– ಎಲ್ಲ ಇರವು. ಅಸತ್ ಎಂದರೆ ಯಾವುದಿಲ್ಲ ಎಂಬುದೂ ಸತ್ಯವೇ... ಸತ್ಯ ಎಂಬ ಮಾತನ್ನು ಆಯತಪ್ಪಿ ಬಳಸಿದರೆ ಅರ್ಥ ಹೊರಳುತ್ತದೆ. 'ನಾನು ಸತ್ಯ ನುಡಿಯುತ್ತಿದ್ದೇನೆ',– 'ಸತ್ಯವೇ ದೇವರು' ಮುಂತಾದ ಮಾತುಗಳನ್ನು ಆಡುವಾಗ ಅರ್ಥದ ನೆಲಸು ಬೇರೆ ಯಾವುದನ್ನೊ ಕುರಿತು ನುಡಿಯುತ್ತದೆ. ಇದು ಇದರ ವಿಷಯದಲ್ಲಿ ನಿಜ (ಇನ್ನೊಂದು ಕ್ಲೇಶ ಕೊಡುವ ಮಾತು)– ಎಂದು ನುಡಿಯುವಾಗ ಇರವಿನ ಅಥವಾ ಸ್ಥಿತಿಯ ಒಂದು ಲಕ್ಷಣವನ್ನು ಕುರಿತು ಇಂಥ ಲಕ್ಷಣ, ಗುಣ ಇಲ್ಲಿ ಸಲ್ಲುತ್ತದೆ ಎಂದು ಹೇಳಿದಂತೆ ಆಗುತ್ತದೆ. ಆ ಸಮಯಕ್ಕೆ ಅದು ಸರಿ ಎಂದು ಹೇಳಿದಂತೆ ಆಗುತ್ತದೆ. ಆ ಸಮಯಕ್ಕೆ ಅದಯ ಸರಿ ಎಂದು ನಂಬಿ; ಅಥವಾ, ಕಪಟದಲ್ಲಿ. ಒಂದು ಇರವಿನ ಭಾಗ; ಇನ್ನೊಂದು ಆ ಸಂಬಂಧದಲ್ಲಿ ಬುದ್ಧಿಗೆ ಗೋಚರವಾದ ಅಂಶವನ್ನು ಹೇಳುವ ಅರ್ಥವ್ಯಾಪಾರ, ಗುಣನಿರ್ದೇಶನ. ಸತ್ಯವನ್ನು ಕಂಡುಹಿಡಿಯುವುದು, ನುಡಿಯುವುದು ಸರ್ವರ ಪ್ರಯತ್ನವಾಗಬೇಕು. ಶಕ್ಯವೊ ಸರಿಯೊ ಎಂಬ ಪ್ರಪಂಚ ಬೇರೆ.

ಸಂದಿಗ್ಧತೆ

ಇವರಲ್ಲಿ, ಇಲ್ಲಿ ಯಾವುದು ಸತ್ಯ ಎಂದಾಗಲೂ ಸಂದಿಗ್ಧತೆ ಉಳಿದೇ ಇರಬಲ್ಲದು. ಕೆಲವೇಳೆ ಕೋರ್ಟುಗಳಲ್ಲಿ ಯಾವುದರದೊ ಸತ್ಯನಿರ್ಣಯವಾಗಬೇಕಾಗುತ್ತದೆ.

ಕೋರ್ಟಿನವರು ಒಪ್ಪುವ ಇನ್ನಾವಾವುವೊ ಪ್ರಮಾಣಗಳಿಗೆ ಅದು ಒಳಪಡಬೇಕು 'ಸತ್' (Reality) ಯಥಾರ್ಥ, ತಥ್ಯ-ಯಾವುದು ಎಂಬುದೂ ಅದರ ವಿಷಯದಲ್ಲಿ ಸತ್ಯ (truth) ಏನು ಎಂಬುದೂ-ಎರಡೂ ಅಲ್ಲಿ ಸೇರುತ್ತವೆ. ಇಂಗ್ಲೀಷಿನ 'True' ಮತ್ತು 'Truth' ಎಂಬ ಎರಡು ಮಾತುಗಳ ಬಳಕೆಯಲ್ಲಿಯೂ ಹೀಗೇ ಸಂದಿಗ್ಧತೆ ಉಂಟು. 'True' ಮೌಲ್ಯಾಂಶ ಗುಣವಾಚಿ; 'Truth' ಆ ಗುಣವುಳ್ಳ ಅಂಶ ನಾಮಪದ. ಬೆಳ್ಳಗಿರುವ ಹಾಲು ಸತ್ಯಾಂಶ; ಬಿಳಿ ಎಂಬುದು ಅದರ ಗುಣ. ಹಾಲಿನ ಪುಡಿಯಿಂದ ಮಾಡಿದ್ದು; ಹಸುವಿನದು; ಸಕ್ಕರೆ ಮಸಾಲೆ ಹಾಕಿದ್ದು ಇವೆಲ್ಲ ಸತ್ಯ. ಅದನ್ನು ಕುರಿತು ವಿವರಣೆ. ಅಲ್ಲಿಯೂ 'Reality' ಅಥವಾ 'Verity' ಇತ್ಯಾದಿ ಮಾತುಗಳನ್ನು ಬಳಸಿ ದಾಟಿಕೊಳ್ಳುವುದು ರೂಢಿ. ಅಲ್ಲಿಯೂ ಬಳಕೆಯಲ್ಲಿ ಗೊಂದಲ ಇದ್ದೇ ಇದೆ. ಈ ನೆಲಸಿನ ಒಂದೆರಡು ಸಂಗತಿಗಳನ್ನು ಮಾತ್ರ ತಮ್ಮ ಮುಂದೆ ಇಡಬೇಕೆಂದಿದ್ದೇನೆ. ಪಾಶ್ಚಿಮಾತ್ಯರಲ್ಲಿ 'Fact' ಅಥವಾ 'Facts' ಎಂಬ ಮಾತಿದೆ. ಸದ್ಯಕ್ಕೆ 'Fact' ಎನ್ನುವುದಕ್ಕೆ 'ಸತ್ಯಾಂಶ'-ಸತ್ಯ ಸಂಗತಿ- ಎಂಬುದನ್ನು ಬಳಸುತ್ತೇವೆ. ಇವೊತ್ತು ನಮ್ಮ ತಿಳಿವಳಿಕೆಯಲ್ಲಿ ಈ ಬಗೆಗೆ ಪರ್ಯಾಲೋಚನೆ, ಶೋಧನೆಮಾಡಬೇಕಾದ ಅಗತ್ಯ ತುಂಬಾ ಇದೆಯಾಗಿ. ಯಾವ ಕಾಲದಲ್ಲಿಯೂ ಈ ಅಗತ್ಯವಿರುವುದಾದರೂ ಈ ಕಾಲಕ್ಕೆ ಅದರ ನೆಲಸು ಯಾವುದೆಂದು ಅರಿತಲ್ಲದೆ ಬದುಕಿಗೆ ಎಂದರೆ ನಡವಳಿಕೆಗೆ ಬೆಲೆ ಕಟ್ಟಲಾಗುವುದಿಲ್ಲ.

ಪರ್ಯಾಲೋಚನೆ

ಇಂದಿನ ಕೂಗುಗಳಲ್ಲಿ ಯಾವುದು ಸತ್ಯ, ಎಷ್ಟು? ಎಂಬುದು ತಿಳಿಯುವುದರ ಜೊತೆಗೆ ಹಿಂದಿನಿಂದ ನಮಗೆ ಬಂದಿರುವುದರಲ್ಲಿ, ನಮ್ಮ ನಂಬಿಕೆಗಳಲ್ಲಿ ಯಾವುದು ಸತ್ಯ, ಯಾವುದು ಅಲ್ಲ ಎಂಬುದನ್ನು ಪುನಃ ವಿವೇಚಿಸಬೇಕಾಗುತ್ತದೆ. ಇವೊತ್ತಿನದರಲ್ಲಿ, ನಾಳೆಯ ಎಣಿಕೆಯಲ್ಲಿ ಬಹುಶಃ ಯಾವುದು ನಿಜವಾಗಬಹುದು ಎಂಬುದನ್ನೂ ಪರ್ಯಾಲೋಚಿಸಬೇಕು-ನಾಡೂ ಬದುಕೂ ಬೆಳೆಯಬೇಕಾದರೆ; ಖಚಿತವಾದ ನಿಶಿತವಾದ ಆಧಾರದ ಮೇಲೆ ಬುದ್ಧಿಕ್ರಿಯೆ, ಸಂಬಂಧದರ್ಶನ, ಸಂಸ್ಥಾಜೀವನ. ಸಾಹಸ ಬೆಳೆಯಬೇಕಾದರೆ...ಬದುಕಿನ ನೆಲೆ ಸರಿಯಾಗಿ ಅರ್ಥವಾಗಬೇಕಾದರೆ.

ಕಾಲ ವಿಭಾಗವನ್ನು ಅನುಲಕ್ಷಿಸಿ ಹಿಂದು, ಇಂದು ಮುಂದು ಎಂಬ ಮಾತುಗಳನ್ನಾಡುತ್ತೇವಲ್ಲವೆ? ಕೆಲವು ಮುಗಿದು ಹೋಗಿವೆ; ಹಿಂದಕ್ಕೆ ಬಾರವು. ಉದಾ: ೧೯೬೬ ಇನ್ನಿಲ್ಲ. ಅವುಗಳ ನೆನಪಿದೆ, ಪರಿಣಾಮಗಳಿವೆ... ನೆನಪು ಒಂದೇ ಎರಡೆ?-ಒಬ್ಬರದೆ? ಹತ್ತು ಜನರದೆ? ಯಾವ ನೆನಪು? ಕಹಿಯೇ, ಸವಿಯೇ? ಸರಿಯೇ, ತಪ್ಪೆ?-ಎಂಬವೂ ಸತ್ಯಗಳು, ಸತ್ಯಸಂಗತಿಗಳೇ... ಆ ಯಾವುದೂ ಈಗ ಉಳಿದಿಲ್ಲ ಎಂದಾಗಲೂ ಅದು ಸತ್ಯ ಸಂಗತಿ ಉದಾ: ಪಲ್ಲವರ ಅಥವಾ ಮೊಗಲ್

ಸಾಮ್ರಾಜ್ಯದ ಕಾಲ; ರಾಮಕೃಷ್ಣರ ಕಾಲ ಇತ್ಯಾದಿ; ಪರಿಣಾಮಗಳೊ? ಇಂದಿನದೆಲ್ಲವೂ ಯಾವ ಯಾವುದರವೊ ಪರಿಣಾಮಗಳು. ನಾಳೆ ಎನ್ನುವುದಿದೆ. ನಾಳೆಯ ಆಶೋತ್ತರಗಳಿವೆ; ಭಯ ಸಂಶಯಗಳಿವೆ. ಇಂದಿನದರಿಂದ ನಾಳೆಗೆ ಬರುವ ಆಪತ್ತು ಪ್ರಯೋಜನಗಳಿವೆ.

ಬಗೆಗಳು

ಸತ್ಯಸಂಗತಿಗಳೆನ್ನುವುವು ಅನೇಕ ಬಗೆ. ಒಬ್ಬೊಬ್ಬರು ಒಂದೊಂದು ರೀತಿ ಸತ್ಯವನ್ನು ಕಾಣುತ್ತಾರೆ; ಬೆಲೆಗಟ್ಟುತ್ತಾರೆ; ಕಾರ್ಯಪ್ರವೃತ್ತರಾಗುತ್ತಾರೆ. ರಾಗದ್ವೇಷಗಳನ್ನೊ ಪಕ್ಷಪಾತಗಳನ್ನೊ ಪ್ರಯೋಜನಕಾಂಡಗಳನ್ನೊ ಬೆಳಸುತ್ತಾರೆ. ಅದಕ್ಕೆ ಅನುಕೂಲವಾಗಿ ಪ್ರತಿಕೂಲವಾಗಿ ಮಾತು, ನಡತೆ, ವಾದ, ರೀತಿ ವಿಧಾನ, ಒಪ್ಪಂದ, ಸಂಬಂಧ ಬೆಳೆಯುತ್ತವೆ. ಒಬ್ಬೊಬ್ಬರ ಎಣಿಕೆಯಲ್ಲಿಯೂ ಇದು ಬೇರೆಯಾದಾಗ ಯಾವ ಅಂಶದಲ್ಲಿಯಾಗಲಿ ಸತ್ಯ ಯಾವುದು ಎಂಬುದರ ಪರಿಚಯ, ಅಭ್ಯಾಸ (Study), ನಿರ್ಣಯ ಅಗತ್ಯವಾದೀತು. ಕೆಲವು ನಿರ್ಣಯಗಳು ಅತಂತ್ರವಾಗಿಯೇ ಉಳಿಯುತ್ತವೆ. ಇವು ಅತಂತ್ರವೆಂಬುದೂ ಸತ್ಯವೇ,– ಸಾಕಾದಷ್ಟು ಪುರಾವೆಯೊ ದರ್ಶನಶುದ್ಧಿಯೊ ಪ್ರಾಮಾಣಿಕತೆಯೊ ಇಲ್ಲದೆ. ಆದರೂ ಸತ್ಯದ ಮೇಲೆಯೇ ಬದುಕನ್ನು ಕಟ್ಟಬೇಕು ಎಂಬ ಮಾತು ಸರ್ವರಿಗೂ ಆದರಣೀಯ. ಒಂದೇ ಮಾತಿಗೆ ಹಿಂದಿನವರು ಒಂದು ರೀತಿ ಅರ್ಥ ಕಟ್ಟುತ್ತಿದ್ದರು; ಇಂದಿನವರು ಬೇರೆ ಪ್ರಯೋಗಗಳನ್ನು ನೋಡುತ್ತಿದ್ದಾರೆ– ಎಂಬವು ಬಂದಾಗ ಹಳತು ಖಿಲವಾಗಿರಬಹುದು. ಇವರು ಒಪ್ಪುವಂಥವಲ್ಲ.

'For last year's words belong
to last year's language:
And next year's words await,
Another voice…'

ಎಂಬ ಪಂಕ್ತಿಗಳಿಲ್ಲಿ ಅಡಗಿರುವ ಅರ್ಥದ ವ್ಯಾಪ್ತಿಯೂ ಗಹನವಾದ್ದೇ. 'ಸತ್ಯ–ಮೇವ ಜಯತೇ ನ ಅನೃತಂ' ಎಂಬುದು ನಮ್ಮ ದೇಶದ ಮಹಾವಾಣಿ. ಇದರ ಅರ್ಥವೇನು? 'I speak the truth, the whole truth. And nothing but the truth' ಎಂಬುದು 'ಕೃಷ್ಣಾರ್ಪಣ' ಎಂಬುದರಷ್ಟೇ ಲೇವಡಿಗೆ ಲಾಯಖ್ಖಾಗಬಲ್ಲದು. ಸತ್ಯವೊಂದೇ ಗೆಲ್ಲುತ್ತದೆ. ಅನೃತವಲ್ಲ ಎಂದಾಗ ಯಾವ ಸತ್ಯ, ಯಾರ ಸತ್ಯ, ಎಂದಿನ ಸತ್ಯ ಎಂಬ ಪ್ರಶ್ನೆಗಳನ್ನು ಕೇಳಿಕೊಂಡು, ಸತ್ಯ ಎಂಬುದಕ್ಕೆ ಇದ್ದುದೆಲ್ಲ; ಇರುವುದೆಲ್ಲ, ಮುಗಿದುದೆಲ್ಲ, ಆಗುವುದೆಲ್ಲ; ಎಣಿಸುವುದೆಲ್ಲ, ಮರೆ ಮಾಚಿದುದೆಲ್ಲ ಎಂಬ ಅರ್ಥವ್ಯಾಪ್ತಿಯನ್ನು ಇಟ್ಟುಕೊಂಡರೆ ಸತ್ಯವೊಂದೇ ಪ್ರಧಾನ; ಅದು ಬಿಟ್ಟು ಇನ್ನು ಯಾವುದೂ ಏನೂ ಇಲ್ಲ; ವಾಸ್ತವಾಂಶಗಳೂ ಸತ್ಯವೇ; ಮೌನಗಳೂ

ಸತ್ಯವೇ. ಇದ್ದುದರ ಸತ್ಯವೇನು, ಇರುವುದರ ಸತ್ಯವೇನು, ನಮ್ಮ ಊಹೆ ಕಲ್ಪನೆಗಳ ಸತ್ಯವೇನು, ಅವು ಜಯಿಸುತ್ತವೆ ಎಂದರೆ ಅರ್ಥವೇನು? ಇಲ್ಲಿ ಅನೃತವಾವುದು, ಎಷ್ಟು? ಎಂಬ ತಿಕ್ಕಾಟಗಳೆಲ್ಲ ಹುಟ್ಟಿಕೊಳ್ಳುತ್ತವೆ. ಅನೃತವೂ ತಥ್ಯವೇ ಆದಾಗ? ಅವರು ಇಲ್ಲದ್ದನ್ನು ಇದೆ ಎನ್ನಲಿಲ್ಲವೆ? ಸತ್ತದ್ದನ್ನು ಬದುಕಿದೆ ಎಂದರಲ್ಲವೆ, ಎಂಬ ಮಾತುಗಳು ಏಳುವುದುಂಟು. ಇದಕ್ಕೆ ಇತಿ ಇಲ್ಲ. ಮಿತಿ ಇಲ್ಲ. ಆ ಕಲ್ಪನೆಯಲ್ಲಿ ಲೋಕವೆಲ್ಲ ಅಡಗಿದೆ, ಕಾಲವೆಲ್ಲ ಅಡಗಿದೆ. ನಡೆಯುವುದೆಲ್ಲ ಅಡಗಿದೆ. ದೇವರ ಹೊರಗಿನದಾವುದೂ ಇಲ್ಲವೆನ್ನುತ್ತೇವೆ–ಸಾಕ್ಷೀಕರಿಸಿ. ದೇವರೊಂದೇ ಸತ್ಯವೆಂದರೆ ಇನ್ನಾವ ಯೋಚನೆಯೂ ಅಗತ್ಯವಿಲ್ಲ. ವಿಷಯದ ಎರಡಂಶಗಳಲ್ಲಿಯೂ ಹಾಗೇ. ಈ ನಡುವೆ ಜನ ತತ್ವಗಳನ್ನೂ ಅಭಿಪ್ರಾಯಗಳನ್ನೂ ಬೆಳಸುತ್ತಾರೆ. ಈ ಸಂದರ್ಭದಲ್ಲಿ ಮೋಹಜಾಲ, ಕಷ್ಟ ಕಾರ್ಪಣ್ಯಗಳು ಅನಂತ ಬಗೆಯ ವಿಮೋಹವೂ ಅತಿ. ಸಂಗತಿಗಳು ತಿಳಿಯಾಗಿ ಮನಸ್ಸಿಗೆ ಅರ್ಥವಾಗುವುದಕ್ಕಿಂತ ಅಬದ್ಧಾಂಶಗಳಿಗೆ, ಅರೆಸತ್ಯಗಳಿಗೆ ಎಡೆಯಾಗುವುದುಂಟು. ಬಹುಮಟ್ಟಿನ ನಮ್ಮ ತಿಳಿವಳಿಕೆಯಲ್ಲಿ, ಕಲ್ಪನೆ ವಾದಗಳಲ್ಲಿ, ಸುತ್ತಮುತ್ತಲಿನ ಬೆಲೆಗಟ್ಟುಗಳಲ್ಲಿ. ಇದನ್ನು ಅರ್ಥಮಾಡಿಕೊಳ್ಳದೆ ಹೋದರೆ ಲೋಕ ಜೀವನಕ್ಕೆ ನಾವು ಯಾವ ಸೇವೆಯನ್ನೂ ಸಲ್ಲಿಸಲಾಗುವುದಿಲ್ಲ; ನಾಳಿನ ಬದುಕೂ ಅಭದ್ರವಾಗುತ್ತದೆ.

ಇಂದಿನ ತೊಳಲು

ಭರತಖಂಡದ ಮತ್ತು ಪಾಶ್ಚಿಮಾತ್ಯರ ರೀತಿನೀತಿಗಳು ಇಂದು ನಮ್ಮಲ್ಲಿ ಸೇರಿಕೊಂಡು ಅನೇಕ ತೊಳಲುಗಳನ್ನೂ ಘರ್ಷಣೆಗಳನ್ನೂ ಸಂದೇಹಗಳನ್ನೂ ಅನಿಶ್ಚಯಗಳನ್ನೂ ತಂದಿವೆ. ಇವು ಸತ್ಯ ಎಂಬುದರ ಒಂದೊಂದು ಮುಖವನ್ನೂ ಅತಿಮಾಡಿ ವಿಕಾರಗೊಳಿಸಿ ಕಾಣಿಸುತ್ತಿವೆ. ಜೀವನ ರೀತಿ ವ್ಯಾಪಾರಗಳೇ ಬೇರೆಯಾಗಿ ಅವುಗಳ ಪರವಾದ ಸಾಮಾನ್ಯ ಪ್ರಭಾವಗಳು ನಮ್ಮ ಕಾಲದ ಮನಸ್ಸನ್ನು ತಟ್ಟಿವೆ. ವಸ್ತುಸತ್ಯದಲ್ಲಿ ಭೌತಿಕ, ರಾಸಾಯನಿಕ, ರಚನೆಯ ಸತ್ಯಗಳಿವೆ. ಅವುಗಳ ಕ್ರಿಯಾ ವ್ಯಾಪಾರವನ್ನು ಕುರಿತು ವಿವೇಚನೆ ಇದೆ. ಬಗೆಬಗೆಯ ಪ್ರಯೋಜನದ ಮತ್ತು ಅಹಿತಕರ ಅಂಶಗಳಿವೆ; ಬುದ್ಧಿಯ ಅಥವಾ ಮನಸ್ಸಿನ ಸತ್ಯಗಳಿವೆ;– ನೀರೋಗ ಮನಸ್ಸಿನವು, ರೋಗಗ್ರಸ್ತ ಮನಸ್ಸಿನವು, ವಾದದ–ವಿದ್ಯೆಯ–ಮೇಧಾವಿತೆಯ ಅಂಶಗಳು ಇವೆ; ಇಚ್ಛೆ, ರಾಗಭಾವಗಳಿವೆ; ತತ್ವ, ಆತ್ಮ, ಅಧ್ಯಾತ್ಮ ಎಂಬ ಚಿಂತನಗಳಿವೆ; ನಡವಳಿಕೆಗೆ ಸಂಬಂಧಿಸಿದವೂ ರಸ ಭಾವ ಬಂಧುರ, ಸುಂದರ ಅಸುಂದರ ಎಂಬ ಸಂಗತಿಗಳೂ ಇವೆ. ಇವುಗಳಲ್ಲಿ ತಾರತಮ್ಯ ವಿವೇಚನೆಗಳಿವೆ. ಇವೆಲ್ಲ ಸತ್ಯದ ಮುಖಗಳೇ. ಇರವನ್ನು ಎಣಿಸುವಾಗ. ಅವುಗಳಲ್ಲಿ ಯಾವುದು ಸರಿ, ತಪ್ಪು ಎಂಬ ಭಾಗ ದೊಡ್ಡದು– ಅನ್ವೇಷಣೆಗೆ. ಅಲ್ಲದೆಯೋ ವಾಸ್ತವ 'ಸತ್' ಎಂಬುದೂ ಮನುಷ್ಯ ಬುದ್ಧಿಗೆ

ಗೋಚರವಾದ್ದೇ; ಹಾಗೆ ಗೋಚರವಾಗದ್ದು ಏನೊ ಯಾರು ಬಲ್ಲರು? ಜ್ಞಾನ, ಜ್ಞಾತೃ, ಜ್ಞೇಯ ಈ ಸಂಬಂಧದಲ್ಲಿ ಜ್ಞೇಯ ಭಾಗವೆಲ್ಲ ಸತ್; ಈಚಿಛಿಣ ಪ್ರಜ್ಞೆಯ ಆ ಸಂಬಂಧದ ಅರಿವು. ಇವಕ್ಕೆ ಈಗ ಹೋಗಬೇಕಿಲ್ಲ. ಇರವಿನ (Reality, the That) ಬಗ್ಗೆ ಸತ್ಯವಾವುದು ಎಂಬುದು ಜ್ಞಾನದ-ಅರಿವಿನ-(Knowledge of it, the What) ಭಾಗ-ಎಂಬ ಅಂಶ. ಹಾಗೇ ಚರಿತ್ರೆ ಎಂಬಲ್ಲಿ ಯಾವ ಚರಿತ್ರೆ? ವ್ಯಕ್ತಿಯ, ಸಮಾಜದ, ರಾಜ್ಯಗಳ ಚರಿತ್ರೆ ಮತ್ತು ಅವುಗಳಲ್ಲಿ ಪರಸ್ಪರ ಮೈತ್ರಿ, ವೈಷಮ್ಯಗಳ ಕಥೆ. ಇಂದಿನ ಪರಿಸ್ಥಿತಿ, ಸನ್ನಿವೇಶ, ಸಮಸ್ಯೆ ಯಾವುವು? ಹೊರ ಒಳ ಸಂಗತಿಗಳಲ್ಲಿ, ನಿಜ ತೋರಿಕೆಗಳಲ್ಲಿ ಯಾವ ಸಾಮಂಜಸ್ಯವಿದೆ? ಪ್ರಾಚೀನ ನವೀನಗಳಲ್ಲಿ ಯಾವುದು ಜೀವಂತ, ಯಾವುದು ಮೃತ, ಉಳಿಕೆ? ನಿತ್ಯಾಂಶ ಯಾವುದು?-ಎಂಬ ಸಂಗತಿಗಳನ್ನು ನಾವು ಅರಿತುಕೊಳ್ಳದಿದ್ದರೆ ನಮ್ಮ ತಿಳಿವಳಿಕೆ ಅಪೂರ್ಣ. ಎಂದರೆ ಒಂದು ಭಾಗದಲ್ಲಿ ಈ acts ಯಾವುವು? ಇನ್ನೊಂದರಲ್ಲಿ ಅವಕ್ಕೆ ಯಾವ ಅರ್ಥ ಯಾವ ಬೆಲೆ ಕೊಡಬೇಕು? ಏಕೆ? ಎಂಬುದೂ ಪ್ರಸ್ತಾಪಕ್ಕೆ ಬರುತ್ತದೆಯೆಂದಾಯಿತು. ಇಲ್ಲಿ ಚರಿತ್ರೆ, ಸಂಪ್ರದಾಯ, ಪ್ರಯೋಜನಾಂಶ ಸೇರುತ್ತದೆ. ಒಳಗೇ ಮುರಿದು ಕೊಂಡಿರುವ ಮುಳ್ಳು ಕೀತು ಕಾಣುವ, ಕಾಣಿಸದ, ಅನುಕೂಲ ಸಮಯ ಬಂದಾಗ ಎದ್ದು ಪ್ರಕಾಶಕ್ಕೆ ಬರುವ ಪ್ರಭಾವಗಳಿರುತ್ತವೆ. ಇವೊತ್ತಿನ ನಮ್ಮ ಸ್ಥಿತಿಗತಿ ಆಶೋತ್ತರಗಳು, ಜೊತೆಗೆ ನಾಳೆಗೆ ನಮ್ಮ ಮಕ್ಕಳು ಮರಿಯ, ನಮ್ಮ ದೇಶದ ಏಳಿಗೆಯ ಪರಿಶೀಲನೆ ಸೇರುತ್ತದೆ. ಸ್ವನಾಶಕರವಾದ ಹೀನತೆ, ದೌರ್ಬಲ್ಯಗಳಿರುತ್ತವೆ. ಕೆಲವು ಇನ್ನೂ ಎಳೆಯ ಅಥವಾ ಕ್ಷೀಣದೆಶೆಯಲ್ಲಿ ಕೆಲವು ಬಲಿತ ಅಥವಾ ಅಭಿವೃದ್ಧಿ ಸ್ಥಿತಿಯಲ್ಲಿ ಕೆಲವು ಕ್ಷೀಣವಾಗುತ್ತ ಇರುತ್ತವೆ. ಈ ಎಲ್ಲ ಕಡೆಗಳಲ್ಲಿಯೂ ಸತ್ಯ ಮತ್ತು ಮೌಲ್ಯಗಳ ಪ್ರಕಾಶ ಬೇರೆಬೇರೆ ಧಾತುವಿನವು; ರಸದವು; ಕಾರ್ಯಕಾರಿಯಾದವು. ಈ ಪರಿಶೀಲನೆ ಕೂಲಂಕುಷವಾಗಿ ಜನಗಳ ಎದೆಮನಗಳಲ್ಲಿ, ಕ್ರಿಯಾರಂಗಗಳಲ್ಲಿ, ಶಿಕ್ಷಣಮಂದಿರಗಳಲ್ಲಿ ನಡೆದ ಹೊರತು ಮುಂದಿನ ದಾರಿಗೆ ಬೆಳಕು ಹಾಯದು. ಇದನ್ನು ಬಹುಜನ ಅರಿತುಕೊಳ್ಳಬೇಕು. ಇದು ನನ್ನ ಮನಸ್ಸಿನಲ್ಲಿ ವಿದ್ಯಾಸಾಧನೆಯ ಪ್ರಧಾನ ಕಾರ್ಯ; ಮೂಲಭೂತವಾದ್ದು, ಅತ್ಯಂತ ಪರಿಣಾಮಕಾರಿ; ಸಮಸ್ತ ಸಾಧನೆಗೂ ನೆಲೆಗಟ್ಟು ಈ ವಿಷಯವನ್ನು ಆರಿಸಿಕೊಂಡುದು ಸ್ಥೂಲವಾಗಿ ಅದನ್ನು ನಿವೇದಿಸುವುದಕ್ಕೆ,

ಪರಿಶೀಲನೆ

ಇದನ್ನು ಇನ್ನು ಸ್ವಲ್ಪ ವಿವರವಾಗಿ ಪರಿಶೀಲಿಸೋಣ.

ಲೋಕ ಜೀವನವೆಲ್ಲ 'ಈಚಿಛಿಣ' ಅಥವಾ 'ಸತ್ಯಸಂಗತಿ'. ಕಂಡದ್ದು, ಕಾಣದ್ದು, ಸ್ಥೂಲ, ಸೂಕ್ಷ್ಮ; ಕಲ್ಪಿತ, ನಿರ್ಮಿತ, ಮೋಹ, ಭ್ರಾಂತಿ; ಭಯ, ಸಂಶಯ, ಅಸತ್ಯ, ಅಡಗಿಸಿಕೊಂಡಿದ್ದು, ಮರೆಮಾಡಲು ಯತ್ನಿಸುವುದು; ಶಾಸ್ತ್ರ, ಕಲೆ, ಅನುಭಾವ-ಎಲ್ಲ.

ಇವುಗಳಲ್ಲಿ ಅನೇಕ ಬಗೆಗಳು ಮಟ್ಟಗಳು ಉಂಟು, ಯಾವುದನ್ನು ಕಣ್ಣಿಂದ ಕಾಣಬಹುದೊ ಅದು ನಿಜ. ಆದರೆ ನೋಡುವವರು ಯಾರು; ಅವರ ಕಣ್ಣು ಸರಿಯಾಗಿದೆಯೆ, ಇಲ್ಲವೆ? ಸರಿಯಾದ ಬೆಳಕಿನಲ್ಲಿ ನೋಡುತ್ತಾರೆಯೇ, ಪದಾರ್ಥದ ಎಷ್ಟು ಭಾಗ ಕಣ್ಣಿಗೆ ಕಾಣುತ್ತದೆ, ನೋಡಲು ವಸ್ತುವಿನ ಯಾವ ಮುಖವನ್ನು ಆರಿಸಿಕೊಳ್ಳುತ್ತಾರೆ? ಯಾವ ಯಂತ್ರ ತಂತ್ರ ವಿಧಾನ ಬಳಸುತ್ತಾರೆ?– ಎಂಬ ಅಂಶಗಳು ಅಲ್ಲಿ ಪ್ರಕೃತ.. ಮತ್ತು, ಕಣ್ಣಿಗೆ ಕಾಣುವುದೆಲ್ಲ ನಿಜವೋ? ಕ್ಯಾಸಿಯೊ ಕೈಯಲ್ಲಿ ತನ್ನ ಕರವಸ್ತ್ರ ಇರುವುದನ್ನು ಒಥೆಲ್ಲೊ ನೋಡಿದ; ಅದು ತಾನು ಡೆಸ್ಡಿಮೋನಾಗೆ ಕೊಟ್ಟಿದ್ದುದು. ಆ ರೀತಿ ವಿಷ ಬೆಳಸಿದ್ದ ಇಯಾಗೊ. ಆ ನೋಟ ಅಥೆಲ್ಲೊ ಈರ್ಷ್ಯೆಗೂ ಕ್ರೋಧಕ್ಕೂ ಕಾರಣವಾಗಿ ಡೆಸ್ಡಿಮೋನ ಕೊಲೆಗೆ ಕಾರಣವಾಯಿತು. ಆ ನಾಟಕದ ದುರಂತ ದಾರುಣತೆಗೆ ವಿಷವೆರೆದ ಪ್ರಸಂಗ ಅದು... ಸತ್ಯಕ್ಕೂ ಅಸತ್ಯಕ್ಕೂ ವ್ಯತ್ಯಾಸವೇನು, ದೂರವೆಷ್ಟು ಎಂದು ಹೈದರಾಲಿ ಕೇಳಿದನಂತೆ. ಪೂರ್ಣಯ್ಯನವರು ಉತ್ತರ ಕೊಟ್ಟರಂತೆ; ನಾಲ್ಕು ಬೆರಳಷ್ಟು ದೂರ–ಎಂದವರೇ ಕಿವಿಗೂ ಕಣ್ಣಿಗೂ ಇರುವಷ್ಟು ದೂರ– ಎಂದು ಹೇಳಿ. ಕಿವಿಕೇಳಿದ್ದಕ್ಕಿಂತ ಕಣ್ಣಲ್ಲಿ ತಾವೇ ಕಂಡದ್ದು ಹೆಚ್ಚು ನಿಜ ಎಂದಂತಲ್ಲವೆ ಮಾತು? ಸರಿ. ಅಲ್ಲಿಯೂ ಸತ್ಯಾಂಶ ಕಣ್ಣಿಗೆ ಬಿದ್ದದ್ದು ಮಾತ್ರವೇಯೇನು? ಕಣ್ಣಿಗೆ ಬೀಳದ್ದೂ ಸತ್ಯಾಂಶವೇ ಅಲ್ಲವೇ? ಇಂಥದು ಎಷ್ಟೋ.. ನಮ್ಮ ದೇಹದಲ್ಲಿ ನಡೆಯುವ ಅನೇಕ ವ್ಯಾಪಾರಗಳೂ ಕ್ರಿಯಾವಿಧಾನಗಳೂ ಕಣ್ಣಿಗೆ ಬೀಳವು. ನಮ್ಮ ತಾತಂದಿರ ಮುಖ, ಗಾತ್ರ, ಎತ್ತರ, ಬಣ್ಣ ನಾವು ಕಾಣೆವು. ಅವರಿಗೆ ಮುಖ ಇತ್ತು, ಬಣ್ಣ ಇತ್ತು, ಗಾತ್ರ ಇತ್ತು, ಯೋಗ್ಯತೆ ಇತ್ತು, ಅವರಿದ್ದರು. ಇಲ್ಲವಾದರೆ ನಾವೆಲ್ಲಿ? ಒಬ್ಬರಿಗೆ ಕಂಡುದೂ ಇನ್ನೊಬ್ಬರಿಗೆ ಕಾಣದಿರಬಹುದು. ವಿದೇಶಗಳನ್ನು ಕೆಲವರು ಕಾಣೆವು ಅನ್ನುವುದು ನಿಜ. ಆದರೆ ದಿನಾ ಅವುಗಳಿಂದ ವಿಮಾನಗಳಲ್ಲಿ ಜನ ಬರುತ್ತಾರೆ. ಎಲ್ಲರ ಕಣ್ಣೂ ಸಾಮಾನ್ಯವಾಗಿ ಒಂದೇ ರಚನೆಯದು, ಶಕ್ತಿಯದು ಬಹುಶಃ ಮನಸ್ಸಿನದು, ಆದಾಗ, ರಾಗದ್ವೇಷಗಳೊ ಬೇನೆಗಳೊ ಅವುಟಗಳೊ ಮೋಹಗಳೊ ಇಚ್ಛೆಯೊ ಕಪಟವೊ ಇರುವಾಗ? ಒಂದೊಂದು ಕನ್ನಡಿ ಒಂದೊಂದು ವಿಧವಾಗಿ ಕಾಣಿಸುತ್ತದೆ ಕೂಡ.

ಕಣ್ಣಿಗೆ ಕಾಣಿಸುವುದೇನು? ಎಂಬುದು ಇಂದಿನ ಚಿತ್ರಕಲೆಯಲ್ಲಿ ಬಹು ದೊಡ್ಡ ಪ್ರಶ್ನೆ; ಅನೇಕ ತತ್ವಗಳಿಗೆ ವಾದಕ್ಕೆ ತಾಪಗಳಿಗೆ ಎಡೆ ಕೊಟ್ಟಿದೆ. ಎಲ್ಲಿ ಹೇಗೆ ನಿಂತು ನೋಡುತ್ತೇವೆ., ಎಷ್ಟು ಕಾಣುತ್ತೇವೆ ಎಂಬುದರಲ್ಲಿ ಹೊರಮ್ಮೆ ಲಕ್ಷಣ ಕಾಣುತ್ತದೆ, ಸತ್ಯಾಂಶದ ವಿಷಯದಲ್ಲಿ ಕಾಣ್ಕೆ, ಪ್ರಮಾಣಗಳು ಹೆಚ್ಚು ಕಡಮೆಯಾಗುತ್ತವೆ. ಹೊರಮ್ಮೆಯಲ್ಲಿಯೂ ಪಾರ್ಶ್ವನೋಟವೆ, ಎದುರು–ನೇರ–ತುಂಬು–ನೋಟವೆ? ನೋಡುತ್ತಿರುವವರು ಯಾರು?–ಎಂಬ ಅಂಶಗಳು ವಸ್ತುಸ್ಥಿತಿಯ ಪರಿಚಯವನ್ನು

ಮಾರ್ಪಡಿಸುತ್ತವೆ. ಸಾಮಾನ್ಯರಿಗೆ ಹಾಗಿದ್ದರೆ ಕಲೆಗಾರನ ಕಣ್ಣು ನೋಡುವುದೇನನ್ನು? ಆ ಮಾತು ಬೇಡ. ಸಾಮಾನ್ಯವಾಗಿ ಹೀಗೆ ಹೇಳುವುದು ವಾಡಿಕೆ. ಯಾವುದು ಒಬ್ಬರಿಗೆ ಅನೇಕ ವೇಳೆ ಬೇರೆ ಬೇರೆ ಸಮಯಗಳಲ್ಲಿ ಒಂದೇ ರೀತಿ ಕಾಣುತ್ತದೆಯೊ ಹಲವರಿಗೆ ಒಂದೇ ಸಮಯದಲ್ಲಿ ಒಂದೇ ರೀತಿ ಕಾಣುತ್ತದೆಯೊ–ಅದು 'Fact'; 'ನಿಜ', 'ಸತ್ಯ'–ವಸ್ತುವಾಗಲಿ, ಗುಣವಾಗಲಿ, ಸಮೀಕರಣವಾಗಿ (Equation) ಸ್ಥಾಪಿತವಾಗುವುದಾಗಲಿ–ಎನ್ನಬಹುದು. ಅದನ್ನು ನಮ್ಮ ರಕ್ತ, ಭಾವ, ಅನುಭವ, ಬುದ್ಧಿ ಹಾಗೆಂದು ಆ ಮಟ್ಟಿಗೆ ಒಪ್ಪುತ್ತದೆ... ಅದನ್ನು ಅಳೆಯಬಹುದು. ತೂಗಬಹುದು, ಎಣಿಸಬಹುದು. 'ಅಳತೆಗೆ ತೂಕಕ್ಕೆ ಎಣಿಕೆಗೆ ಒಳಗಾದುವು ಸಕಲ ವಸ್ತುಗಳ್' ಎಂದ ಪಂಪ ಕವಿ. ('ಸಕಲ'ಕ್ಕೆ ಎರಡು ಅರ್ಥವುಂಟು. ಸ+ಕಲ ಮತ್ತು ಸಕಲ) ಇಂದಿನ ವಿಜ್ಞಾನ ಪ್ರಪಂಚದಲ್ಲಿ ಎಲ್ಲ ಪ್ರಾಯೋಗಿಕ ಪರೀಕ್ಷೆಗೂ ಮೂಲ ಸಾಧನ ಅಳತೆ (Measurement) ಐನ್‌ಸ್ಟೈನರ ಸತ್ಯದರ್ಶನ ಒಂದು ಗಣಿತದ E=Mc2 (ಘನ–ಚೈತನ್ಯ?) ಎಂಬ ಸಮೀಕರಣವಂತೆ. ಹಾಗೆಯೇ ಅವರ ಸತ್ಯಕ್ಕೆ ಉದ್ದ, ಅಗಲ, ಎತ್ತರ ಆಳಗಳ ಜೊತೆಗೆ ಕಾಲ ಒಂದು ಬಗೆಯಲ್ಲಿ ನಾಲ್ಕನೆಯ ಅವಯವ, ಪದಾರ್ಥದ ಲಕ್ಷಣ–ಸ್ವರೂಪ–ಇವು ಬೇರೆ ಬೇರೆ ಅರ್ಥವ್ಯಾಪ್ತಿಯ ಮಾತುಗಳು; ತಿಳಿಯಲು ಇದೊಂದು ವಿಧಾನ; ತಂತ್ರ. ಹಲವು ಪದಾರ್ಥಗಳನ್ನು ಸುಲಭವಾಗಿ ಅಳೆಯಬಹುದು. ಒಂದೊಂದನ್ನು ಅಳೆಯಲು ಬೇರೆ ಬೇರೆ ಪ್ರಕಾರಗಳುಂಟಾದರೂ ಈ ಅಳತೆ ಇಷ್ಟೇ ಎಂದು ಗೊತ್ತುಮಾಡಿಕೊಳ್ಳಬಹುದು. ಉದಾ: ಒಂದು ಮರದ ಜಾತಿ, ಚರಿತ್ರೆ, ರಚನೆ, ಗಾತ್ರ, ಗುಣ, ಪ್ರಯೋಜನ ಎಷ್ಟೋ ಇರುತ್ತವೆ. ತಕ್ಷಣಕ್ಕೆ ಬೇಕಾದವು, ಬೇಡವಾದವು, ಇನ್ನೂ ಅರಿಯದೆ ಉಳಿದಿರುವುವು. ಆದರೆ ಮರದ ಸ್ವರೂಪವನ್ನು ತಿಳಿಸುತ್ತವೆ.

ಮಾನಸಿಕ ಸಂಗತಿಗಳ ಪ್ರಪಂಚ ಬೇರೆ. ಅವು ಹೆಚ್ಚು ಸೂಕ್ಷ್ಮ; ಅವುಗಳ ಗ್ರಹಣವೂ ಹಾಗೇ; ಒಂದಳತೆಗೆ ಹತ್ತಕ್ಕೆ ಸಿಕ್ಕದೆ ನುಸುಳಿಕೊಳ್ಳಬಹುದು. ಈ ಎಲ್ಲವನ್ನೂ ಬುದ್ಧಿ ಇರುವ ಮನುಷ್ಯ ಒಪ್ಪಿಕೊಳ್ಳಬೇಕು; ಒಪ್ಪಿಕೊಳ್ಳುತ್ತಾನೆ. ಕೆಲವು ಸಿದ್ಧ; ಕೆಲವು ಸಾಧ್ಯ, ಕೆಲವು ಅನಿಶ್ಚಿತ, ಅತಂತ್ರ; ಮತ್ತೆ ಕೆಲವು ಗುಪ್ತ, ಧ್ವನಿತ, ಅನಂತ. ಕೆಲವನ್ನು ಕುರಿತು ಭಿನ್ನಾಭಿಪ್ರಾಯ ಇರುತ್ತದೆ. ವಸ್ತು ಸ್ವರೂಪವನ್ನು ನಿರ್ದೇಶಿಸುವಾಗ Categorie ಎಂಬ ಪದಾರ್ಥ ವರ್ಗಗಳನ್ನು ತರ್ಕದಲ್ಲಿ ಉಪಯೋಗಿಸುತ್ತಾರೆ.

ಅರಿಸ್ಟಾಟಲ್ ಹೇಳಿದಂತೆ ಆ ವರ್ಗಗಳು–ದ್ರವ್ಯ, ಪರಿಮಾಣ, ಸಂಬಂಧ, ದೇಶ, ಕಾಲ, ಅವಸ್ಥೆ. ಸ್ವಾಧೀನ, ಕ್ರಿಯೆ, ನಿಷ್ಕ್ರಿಯೆ ಎಂಬವು.

ಗಾಂಧಿ-ಅಂಬೇಡ್ಕರ್ ಎಂಬ ಒಗಟು ಮತ್ತು ವಿಸ್ಮಯ

– ಡಾ.ಎನ್.ಜಗದೀಶ್ ಕೊಪ್ಪ

ಭಾರತದ ಆಧುನಿಕತೆಯ ಸಾಮಾಜಿಕ ಮತ್ತು ರಾಜಕೀಯ ಇತಿಹಾಸದಲ್ಲಿ ನಿರಂತರವಾಗಿ ಚರ್ಚೆಗೆ ಹಾಗೂ ಪುನರ್ ವ್ಯಾಖ್ಯಾನಕ್ಕೆ ಒಳಪಡುತ್ತಿರುವವರಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಮುಖ್ಯರಾಗಿದ್ದಾರೆ. ಆದರೆ, ಗ್ರಹಿಕೆಯ ದೋಷಗಳು ಮತ್ತು ಇತಿಹಾಸದ ಪ್ರಜ್ಞೆಯ ಕೊರತೆಯಿಂದಾಗಿ ಅರೆಬೆಂದ ಮನಸ್ಥಿತಿಯಲ್ಲಿ ಅವರವರ ಮೂಗಿನ ನೇರಕ್ಕೆ ಕುರುಡರು ಆನೆಯನ್ನು ಮುಟ್ಟಿ ಬಣ್ಣಿಸಿದಂತೆ ವ್ಯಾಖ್ಯಾನಿಸುತ್ತಿದ್ದಾರೆ. ಇಂತಹ ಕುರುಡು ವ್ಯಾಖ್ಯಾನವನ್ನು ಪರಮ ಇತಿಹಾಸವೆಂಬಂತೆ ನಂಬಿ ಆವೇಶ ಮತ್ತು ಆರಾಧನೆಯ ಮೂಲಕ ಕೆಲವರು ಈ ಇಬ್ಬರ ವ್ಯಕ್ತಿತ್ವಕ್ಕೆ ಮಸಿ ಬಳಿಯುತ್ತಿದ್ದಾರೆ. ವ್ಯಕ್ತಿತ್ವದ ಆರಾಧನೆ ಅಥವಾ ಅಭಿಮಾನ ಮನುಷ್ಯನಲ್ಲಿ ವಿವೇಕತನವನ್ನಾಗಲಿ, ವಿಮರ್ಶೆಯ ಪ್ರಜ್ಞೆಯನ್ನಾಗಲಿ ಬೆಳಸುವುದಿಲ್ಲ. ಈ ಕಾರಣದಿಂದಾಗಿ ಇಂದಿನ ಭಾರತದಲ್ಲಿ ಪ್ರತಿಯೊಬ್ಬ ಚಾರಿತ್ರಿಕ ಪುರುಷನನ್ನು ಜಾತಿ, ಧರ್ಮ ಅಥವಾ ಪ್ರಾದೇಶಿಕ ಹಿನ್ನಲೆಯಲ್ಲಿ ಗುರುತಿಸಿ ಉತ್ಸವ ಮೂರ್ತಿಗಳಂತೆ ವಿಜೃಂಭಿಸಲಾಗುತ್ತಿದೆ. ಒಬ್ಬನನ್ನು ಉತ್ತುಂಗಕ್ಕೇರಿಸುವ ಆತುರ ಮತ್ತು ಆವೇಶದಲ್ಲಿ ಮತ್ತೊಬ್ಬ ನಾಯಕನ ಚಾರಿತ್ರ್ಯ ವಧೆಯನ್ನು ಮಾಡಲಾಗುತ್ತಿದೆ. ಇತ್ತೀಚೆಗೆ ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಮುಖಾಮುಖಿಯಾಗಿಸಿ, ಗಾಂಧೀಜಿಯನ್ನು ಖಳನಾಯಕರಂತೆ ಚಿತ್ರಿಸುವ ಹೊಸ ತಲೆಮಾರೊಂದು ಸೃಷ್ಟಿಯಾಗಿರು ವುದು ವರ್ತಮಾನದ ದುರಂತ. ಇದರಿಂದ ಪ್ರೇರಣೆಗೊಂಡ ದೇಶ ಭಕ್ತರೆಂಬ ಆರೋಪ ವನ್ನು ಹೊತ್ತವರು ಗಾಂಧೀಜಿಯನ್ನು ಕೊಂದ ಪಾತಕಿ ನಾಥೂರಾಂ ಗೂಡ್ಸೆಯನ್ನು ಮಹಾತ್ಮನ ಪಟ್ಟಕ್ಕೇರಿಸಿ, ಅವನಿಗೆ ದೇಗುಲ ನಿರ್ಮಿಸಸಿ ಪೂಜಿಸತೊಡಗಿದ್ದಾರೆ. ಇತಿಹಾಸದ ಪ್ರಜ್ಞೆಯಿಲ್ಲದ ಸಮಾಜ ಅಥವಾ ಸಮುದಾಯವು ಒಂದು ದೇಶವನ್ನು ಯಾವ ದಿಕ್ಕಿನತ್ತ ಕೊಂಡೊಯ್ಯಬಲ್ಲದು ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಈ ಸಂದರ್ಭದಲ್ಲಿ ಅಂಬೇಡ್ಕರ್ ಕುರಿತ ಕುರುಡು ಅಭಿಮಾನವನ್ನು ಇಲ್ಲಿ ಉದಾಹರಣೆಯಾಗಿ ನೀಡಬಹುದು. ಡಾ.ಬಿ.ಆರ್. ಅಂಬೇಡ್ಕರ್ ಈ ದೇಶ ಕಂಡ ಪ್ರಖರ ಚಿಂತಕ, ಆರ್ಥಿಕ ತಜ್ಞ, ಹಾಗೂ ರಾಜಕೀಯ, ಸಾಮಾಜಿಕ ಸ್ಥಿತ್ಯಂತರಗಳನ್ನು ಮತ್ತು ಇಲ್ಲಿನ ಜಾತಿ ಹಾಗೂ ಧರ್ಮದ ನೆಲೆಗಳ ದೋಷಗಳನ್ನು ನಿಖರವಾಗಿ ಗುರುತಿಸಿ ವಸ್ತು ನಿಷ್ಟವಾಗಿ ವಿಶ್ಲೇಷಣೆ ಮಾಡಿದ ಮಹಾನ್ ಮೇಧಾವಿ. ಸ್ವಾತಂತ್ರ್ಯಾ ನಂತರದ ಭಾರತದ ಸಂವಿಧಾನ ರಚನೆಯಲ್ಲಿ ಕರಡು ಸಮಿತಿಯ ಅಧ್ಯಕ್ಷರಾಗಿ ಅವರು ಮಹತ್ತರ ಕಾರ್ಯನಿರ್ವಹಿಸಿದರು. ಆದರೆ, ಅಂಬೇಡ್ಕರ್ ಅಭಿಮಾನಿಗಳು

ಅವರನ್ನು "ಸಂವಿಧಾನ ಶಿಲ್ಪಿ" ಎಂದು ಕರೆಯತೊಡಗಿದ ಕಾರಣಕ್ಕಾಗಿ ಅಂಬೇಡ್ಕರ್ ಒಬ್ಬರೇ ಸಂವಿಧಾನವನ್ನು ರಚಿಸಿದರು ಎಂಬ ತಪ್ಪು ಕಲ್ಪನೆಯೊಂದು ಎಲ್ಲೆಡೆ ಹರಡಿತು.

ಈ ಕುರಿತು ಸ್ವತಂ ಅಂಬೇಡ್ಕರ್, ಸಂವಿಧಾನ ಕರಡು ಸಿದ್ಧಗೊಂಡನಂತರ ಅಂದಿನ ರಾಷ್ಟ್ರಪತಿಯಾಗಿದ್ದ ಬಾಬುರಾಜೇಂದ್ರ ಪ್ರಸಾದ್ ಅಧ್ಯಕ್ಷತೆಯಲ್ಲಿ ನಡೆದ ಅಭಿನಂದನಾ ಸಮಿತಿಯಲ್ಲಿ ಆಡಿದ ನುಡಿಗಳು ಅವರ ವಿಶಾಲ ಮನೋಭಾವಕ್ಕೆ ಸಾಕ್ಷಿಯಾಗಿವೆ.

"ಆತ್ಮೀಯರೇ, ನನ್ನ ಮೇಲೆ ಅಭಿನಂದನೆಯ ಸುರಿಮಳೆಗೈಯುತ್ತಿರುವ ಸಂವಿಧಾನ ಶಾಸನ ಸಭೆಯ ಸದಸ್ಯರು ಮತ್ತು ಸಂವಿಧಾನ ಕರಡು ರಚನಾ ಸಮಿತಿಯ ಸಹೋದ್ಯೋಗಿಗಳ ಮಾತುಗಳನ್ನು ಕೇಳಿ ಹೇಗೆ ಪ್ರತಿಕ್ರಿಯಿಸಬೇಕೆಂಬುದು ನನಗೆ ತೋಚುತ್ತಿಲ್ಲ. ವಾಸ್ತವವಾಗಿ ನಾನು ಈ ದೇಶದ ದಲಿತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಶಾಸನ ಸಭೆಯನ್ನು ಸೇರಿದ್ದೆ. ಆದರೆ, ಇಲ್ಲಿನ ಸದಸ್ಯರು ನನ್ನನ್ನು ಸರವಿಧಾನ ರಚನೆಯ ಸಮಿತಿಗೆ ಆಯ್ಕೆ ಮಾಡಿದಾಗ ಆಶ್ಚರ್ಯವಾಯಿತು. ಜೊತೆಗೆ ನನ್ನನ್ನು ಸಮಿತಿಯ ಅಧ್ಯಕ್ಷನನ್ನಾಗಿ ಮಾಡಿದ್ದು ಪರಮಾಶ್ಚರ್ಯವಾಯಿತು ಏಕೆಂದರೆ, ಸಮಿತಿಯಲ್ಲಿ ನನಗಿಂತ ಹಿರಿಯರೂ, ಪ್ರಾಜ್ಞರಾಗಿದ್ದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರಂತಹ ಮಹಾನು ಭಾವರಿದ್ದರು. ನನ್ನ ಮೇಲೆ ಇಷ್ಟೊಂದು ಅಭಿಮಾನ, ವಿಶ್ವಾಸ ಇಟ್ಟು ಈ ಕಾರ್ಯದಲ್ಲಿ ತೊಡಗಿಸಿ ಈ ದೇಶಕ್ಕೆ ನನ್ನ ಕೈಯಲ್ಲಾದ ಸೇವೆಯನ್ನು ಮಾಡಲು ಅವಕಾಶ ನೀಡಿದ ನಿಮ್ಮೆಲ್ಲರಿಗೂ ಈ ಮೂಲಕ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ನನಗೆ ಸಿಗುತ್ತಿರುವ ಈ ಹೊಗಳಿಕೆ ಮತ್ತು ಅಭಿನಂದನೆಯ ಮಾತುಗಳು ನಿಜವಾಗಿಯೂ ಬೆನಗಲ್ ನರಸಿಂಹರಾವ್ ಅವರಿಗೆ ಸಲ್ಲಬೇಕು. ಏಕೆಂದರೆ, ಸಂವಿಧಾನ ಕರಡು ರಚನೆಯ ಸಮಿತಿಗಿಂತ ಮುನ್ನ ಅವರು ಸಂವಿಧಾನ ಕುರಿತು ೨೬೩ ಕ್ಕೂ ಹೆಚ್ಚು ವಿಷಯಗಳನ್ನು ಅಡಕಗೊಳಿಸಿ (ಕರಡನ್ನು) ಸಿದ್ಧಗೊಳಿಸಿದ್ದರು. ಅವರು ಸಮಿತಿಯ ಸಲಹೆಗಾರರಾಗಿ ಸಂವಿಧಾನದ ಕರಡು ಪ್ರತಿಯನ್ನು ತಯಾರಿಸಿಕೊಟ್ಟರು. ನಾವುಗಳು ಅದನ್ನು ಪರಾಮರ್ಶಿಸಿ ಹೊಸದಾಗಿ ೧೩೦ ಕ್ಕೂ ಹೆಚ್ಚಿನ ವಿಷಯಗಳನ್ನು ಕರಡು ವಿಧೇಯಕಗಳಾಗಿ ಅಡಕಗೊಳಿಸಿದೆವು. ಇಂತಹ ಕಾರ್ಯದಲ್ಲಿ ಎ.ಎನ್. ಮುಖರ್ಜಿಯವರು ಹೆಚ್ಚಿನ ಶ್ರಮ ವಹಿಸಿದರು. ಕ್ಲಿಷ್ಟವಾದ ಕಾನೂನು ವಿಷಯಗಳನ್ನು ಸರಳೀಕರಿಸಿದ ಮುಖರ್ಜಿಯವರ ಜಾಣ್ಮೆಯಿಂದಾಗಿ ಕೇವಲ ೧೪೧ ದಿನಗಳಲ್ಲಿ ಸಂವಿಧಾನ ರಚನೆ ಸರಳವಾಯಿತು. ಇಲ್ಲದಿದ್ದರೆ, ಈ ಕಾರ್ಯಕ್ಕೆ ಅನೇಕ ವರ್ಷಗಳು ಬೇಕಾಗುತ್ತಿದ್ದವು.ಅದೇ ರೀತಿ ಮುಖರ್ಜಿಯವರ ಕೈ ಕೆಳಗೆ ಹಗಲು-ರಾತ್ರಿ ಎಂಬ ಪರಿವಿಲ್ಲದೆ ಕೆಲಸ ಮಾಡಿದ ಎಲ್ಲಾ ಮಹನೀಯರನ್ನು ನಾನು ನೆನೆಯುತ್ತೀನಿ." ಅಂಬೇಡ್ಕರ್ ರವರ ಈ ಮಾತುಗಳನ್ನು (Constituent Assembly Debates,

Vol X, pp. 973&974 ಸಂಪುಟದಲ್ಲಿಇದನ್ನು ಗಮನಿಸ ಬಹುದು.)

ಇಲ್ಲಿ ಈ ಮಾತುಗಳನ್ನು ಪ್ರಸ್ತಾಪಿಸಿದ ಮುಖ್ಯ ಉದ್ದೇಶವೆಂದರೆ; ಭಾರತ ದೇಶವು ಹೊಸಯುಗದ ಎಷ್ಟೇ ಅವತಾರಗಳನ್ನು ತಾಳಿದರೂ ಸಹ ಈ ನೆಲದಲ್ಲಿ ಬುದ್ಧ, ಬಸವ ,ಗಾಂಧಿ ಮತ್ತು ಅಂಬೇಡ್ಕರ್ ಎಂಬ ಯುಗಪುರುಷರ ಹೆಸರನ್ನು ಅಳಿಸಿ ಹಾಕಲು ಸಾಧ್ಯವಾಗದು. ಏಕೆಂದರೆ, ಇವರೆಲ್ಲರೂ ಭಾರತದ ಜನಮಾನಸದ ಸ್ಮೃತಿಯ ಒಂದು ಭಾಗವಾಗಿ ಹೋಗಿದ್ದಾರೆ. ಇವರಿಗೆ ಯಾವುದೇ ರೀತಿಯ ಹೊಸ ಬಿರುದಾವಳಿಗಳು ಅಥವಾ ವಿಶೇಷಣಗಳು ಬೇಕಾಗಿಲ್ಲ. ಸಧ್ಯದ ಸ್ಥಿತಿಯಲ್ಲಿ ಇಂತಹರನ್ನು ತಲೆ ಬುಡವಿಲ್ಲದ ತತ್ವ ಸಿದ್ಧಾಂತಗಳ ಆಧಾರದ ಮೇಲೆ ಅಪಮಾನಗೊಳಿಸುವ ಇಲ್ಲವೆ ಅವರ ಚರಿತ್ರೆಯನ್ನು ತಿರುಚುವ ಕೆಲಸಗಳನ್ನು ನಾವು ನಿಲ್ಲಿಸಬೇಕಿದೆ. ಇದು ಈ ಮಹನೀಯರಿಗೆ ನಾವು ತೋರಿಸಬಹುದಾದ ಗರಿಷ್ಟ ಗೌರವ. ಈಗಾಗಲೇ ಭವಿಷ್ಯದ ಭಾರತವನ್ನು ಅನಾಗರೀಕ ಸಮಾಜದತ್ತ ಕೊಂಡೊಯ್ಯುವ ಎಲ್ಲಾ ಸೂಚನೆಗಳು ಗೋಚರವಾಗುತ್ತಿವೆ. ಇಂತಹ ಸಂಕಷ್ಟದ ಸ್ಥಿತಿಯಲ್ಲಿ ಅಮಾನವೀಯ ಹಾಗೂ ಎಲ್ಲಾ ಪೈಶಾಚಿಕ ಕೃತ್ಯಗಳ ವಿರುದ್ಧ ಗಾಂಧಿ ಮತ್ತು ಅಂಬೇಡ್ಕರ್ ಮನುಕುಲಕ್ಕೆ ಬೆಳಕಾಗಬಲ್ಲ ಚಿಂತನೆಗಳನ್ನು ಎದುರು ನಿಲ್ಲಿಸುವುದರ ಮೂಲಕ ಸೈತಾನರ ಅಟ್ಟಹಾಸಗಳನ್ನು ಅಡಗಿಸುವ ನೈತಿಕ ಜವಾಬ್ದಾರಿಯು ಭಾರತದ ಎಲ್ಲಾ ಪ್ರಜ್ಞಾವಂತ ನಾಗರೀಕರ ಮೇಲಿದೆ.

ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ನಡುವೆ ಅನೇಕ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದವು. ಆದರೆ, ಅವುಗಳನ್ನು ಅವರೆಂದೂ ವೈಯಕ್ತಿಕ ದ್ವೇಷಕ್ಕೆ ಇಳಿಸಲಿಲ್ಲ. ಅಂಬೇಡ್ಕರ್ ಅವರನ್ನು ಗೌರವಿಸುವ್ಯದೆಂದರೆ; ಗಾಂಧಿಯನ್ನು ಹಿಯಾಳಿಸುವುದು ಅಥವಾ ದ್ವೇಷಿಸುವುದು ಎಂದು ನಂಬಿರುವ ಆಧುನಿಕ ತಲೆಮಾರಿಗೆ ಈ ಇತಿಹಾಸವೂ ಸಹ ಗೊತ್ತಿರಬೇಕು. ಭಾರತಕ್ಕೆ ಸ್ವಾಂತತ್ರ್ಯ ನೀಡುವ ಮುನ್ನ ಅಸ್ತಿತ್ವದಲ್ಲಿದ್ದ ನೆಹರೂ ನೇತೃತ್ವದ ಮಧ್ಯಂತರ ಸರ್ಕಾರದಲ್ಲಿ ಅಂಬೇಡ್ಕರ್ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕೆಂದು ಆದೇಶಿಸಿದವರು ಗಾಂಧೀಜಿ. ಅಷ್ಟೇ ಅಲ್ಲದೆ, ಸಂವಿಧಾನ ಕರಡು ರಚನೆಯ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಅಂಬೇಡ್ಕರ್ ಅವರ ಹೆಸರನ್ನು ಸೂಚಿಸಿದವರು ಗಾಂಧೀಜಿ. ನೋವಿನ ಸಂಗತಿಯೆಂದರೆ, ೧೯೫೫ ರಲ್ಲಿ ಗಾಂಧೀಜಿ ನಿಧನಾನಂತರ ಬಿ.ಬಿ.ಸಿ. ರೇಡಿಯೋ ಗೆ ಅಂಬೇಡ್ಕರ್ ಅವರು ನೀಡಿರುವ ಸಂದರ್ಶನದಲ್ಲಿ ಗಾಂಧೀಜಿ ಕುರಿತು ಆಡಿರುವ ಮಾತುಗಳು ಗಾಂಧಿಗಿದ್ದ ಹೃದಯ ವೈಶಾಲ್ಯತೆ ಅಂಬೇಡ್ಕರ್ ಅವರಿಗೆ ಇರಲಿಲ್ಲ ಎಂಬುದನ್ನು ಸಾಬೀತು ಪಡಿಸುತ್ತವೆ. (ಆಸಕ್ತರು ಇದನ್ನು ಯೂ ಟ್ಯೂಬ್ ನಲ್ಲಿ ಕೇಳಬಹುದು)

ಗಾಂಧೀಜಿ ಸ್ವತಃ ದಲಿತನಾಗಿ ಹುಟ್ಟದಿದ್ದರೂ ಒಬ್ಬ ದಲಿತನ ಅಪಮಾನ

ಮತ್ತು ನೋವುಗಳನ್ನು ಅರ್ಥಮಾಡಿಕೊಳ್ಳುವ ಮಾತೃಹೃದಯ ಅವರಲ್ಲಿತ್ತು. ಹಾಗಾಗಿ ಅವರು ಭಾರತ ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ಈ ದೇಶದಲ್ಲಿ ತಾಂಡವವಾಡುತ್ತಿದ್ದ ಅಸ್ಪೃಶ್ಯತೆ, ಅನಕ್ಷರತೆ, ಬಡತನ, ಜಾತಿ ವೈಷಮ್ಯ ಇವುಗಳ ವಿರುದ್ಧ ಹೋರಾಡುತ್ತಾ ಎಲ್ಲವನ್ನೂ ಜೊತೆಗೆ ಕೊಂಡೊಯ್ಯುತ್ತಿದ್ದರು. ದಕ್ಷಿಣಾ ಆಫ್ರಿಕಾದ ಅವರ ಅನುಭವ ಈ ಜಗತ್ತನ್ನು ವರ್ಣ ಮತ್ತು ಲಿಂಗ ಬೇಧ ಮಾತ್ರವಲ್ಲದೆ, ಜಾತಿ ಮತ್ತು ಧರ್ಮದ ನೆಲೆಗಳ ಆಚೆ ನಿಂತು ಯೋಚಿಸುವಂತೆ ಮಾಡಿತ್ತು. ತಾನೊಬ್ಬ ಸನಾತನವಾದಿ ಹಿಂದೂ ಎಂದು ಅವರು ಘೋಷಿಸಿಕೊಂಡಿದ್ದರೂ ಸಹ ಅವರೊಳಗೊಬ್ಬ ಬಂಡುಕೋರನಿದ್ದ. ಧರ್ಮ ಅಥವಾ ನೈತಿಕತೆ ಆಯ್ಕೆಗಳು ನನಗೆ ಎದುರಾದರೆ; ನಾನು ಧರ್ಮಕ್ಕಿಂತ ನೈತಿಕತೆಯನ್ನು ಆಯ್ಕೆ ಮಾಡಿಕೊಳ್ಳುತ್ತೀನಿ ಎನ್ನುತ್ತಿದ್ದರು. ಅವರು ಅಂಬೇಡ್ಕರ್ ವಿದೇಶದಲ್ಲಿ ಶಿಕ್ಷಣ ಮುಗಿಸಿ ಭಾರತಕ್ಕೆ ಬಂದು ಅಶ್ಪೃಸ್ಯತೆಯ ವಿರುದ್ಧ ಹೋರಾಟ ಆರಂಬಿಸುವ ಮುನ್ನವೇ, ಗಾಂಧಿ ೧೯೧೬-೧೭ ರ ಸಮಯದಲ್ಲಿ ಅಹಮದಾಬಾದಿನ ಸಮರಮತಿ ಆಶ್ರಮದಲ್ಲಿ ಹರಿಜನ ಕುಟುಂಬವೊಂದಕ್ಕೆ ಆಶ್ರಯ ಕಲ್ಪಿಸಿ ಅಸ್ಪರ್ಶತೆಯ ನಿರ್ಮೂಲನಕ್ಕೆ ನಾಂದಿ ಹಾಡಿದ್ದರು. ಆಶ್ರಮವಾಸಿಗಳು ಇದರ ವಿರುದ್ಧ ಪ್ರತಿಭಟಿಸಿ ಹೊರ ನಡೆದಾಗ ಗಾಂಧೀಜಿ ಎದೆಗುಂದಲಿಲ್ಲ. ಒಬ್ಬ ಅನಾಮಿಕ ಗುಜರಾತಿನ ಮಾರ್ವಾಡಿಯೊಬ್ಬ ಸಂಜೆಯ ಮಬ್ಬು ಗತ್ತಲಿನಲ್ಲಿ ಬಂದು ಆಶ್ರಮಕ್ಕೆ ಒಂದು ವರ್ಷಕ್ಕೆ ಆಗುವಷ್ಟು ಧನ ಸಹಾಯ ನೀಡಿದಾಗ ಅವರೊಳಗಿನ ನೈತಿಕತೆಗೆ ಹೆಚ್ಚು ಬಲ ಬಂದಿತು.

ದಲಿತರಿಗೆ ಮತ್ತು ಹಿಂದುಳಿದ ಜಾತಿಯ ಜನರಿಗೆ ಪ್ರವೇಶವಿಲ್ಲದ ಭಾರತದ ಯಾವುದೇ ದೇಗುಲಗಳಿಗೆ ಅವರು ಭೇಟಿ ನೀಡಲಿಲ್ಲ. ಉಡುಪಿ ಕೃಷ್ಣ ಮಠದ ಎದುರು ಹಾಯ್ದು ಹೋದ ಸಂದರ್ಭದಲ್ಲಿಯೂ ಅವರು ದೇಗುಲ ಪ್ರವೇಶ ಮಾಡಲಿಲ್ಲ. ೧೯೨೪-೨೫ ರಲ್ಲಿ ಕೇರಳದ ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ವೈಕಂ ಎಂಬ ಊರಿನಲ್ಲಿ ದಲಿತರಿಗೆ ದೇಗುಲ ಪ್ರವೇಶಕ್ಕೆ ಒತ್ತಾಯಿಸಿ ಪೆರಿಯಾರ್ ರಾಮಸ್ವಾಮಿ ನಡೆಸುತ್ತಿದ್ದ ಹೋರಾಟಕ್ಕೆ ಬೆಂಬಲ ಸೂಚಿಸಿದ್ದಲ್ಲದೆ ಸ್ವತಃ ಪಾಲ್ಗೊಂಡರು. ಇವೆಲ್ಲವೂ ಅಂಬೇಡ್ಕರ್ ಅವರಿಗಿಂತ ಮುಂಚೆ ಗಾಂಧೀಜಿ ಕೈಗೊಂಡಿದ್ದ ಅಸ್ಪೃಶ್ಯತೆಯ ನಿವಾರಣೆ ಕುರಿತ ಕಾರ್ಯಚಟುವಟಿಕೆಗಳು. ೧೯೩೦ ರಲ್ಲಿ ಅವರು ಅಹಮದಾಬಾದಿನ ಸಬರಮತಿ ಆಶ್ರಮದಿಂದ ಸೂರತ್ ಬಳಿಯ ದಂಡಿ ಕಡಲ ಕಿನಾರೆಯವರೆಗೆ ಉಪ್ಪಿನ ಸತ್ಯಾಗ್ರಹದ ಅಂಗವಾಗಿ ೨೭೩ ಕಿಲೊಮಿಟರ್ ಉದ್ದವನ್ನು ಕಾಲ್ನಡಿಗೆಯ ಮೂಲಕ ಪಾದಯಾತ್ರೆ ಆರಂಭಿಸಿದರು. ಪ್ರಯಾಣದ ಸಂದರ್ಭದಲ್ಲಿ ತಮ್ಮ ಹಿಂಬಾಲಕರ ಮೂಲಕ ತಾವು ತಂಗುತ್ತಿದ್ದ ಹಳ್ಳಿಗಳ ಹರಿಜನ ಬಸ್ತಿಗಳಿಗೆ ಭೇಟಿ ನೀಡಿ, ಅಲ್ಲಿನ ದಲಿತರ ಸ್ಥಿತಿಗತಿಗಳನ್ನು ದಾಖಲಿಸಿ ಕೊಳ್ಳುತ್ತಿದ್ದರು.

ಗಾಂಧೀಜಿ ಕೇವಲ ಒಬ್ಬ ವ್ಯಕ್ತಿ ಮಾತ್ರವಾಗಿರದೆ, ಒಂದು ಶಕ್ತಿಯಾಗಿ ಭಾರತದ ಹಲವು ಬಗೆಯ ಜೀವನ ಮೌಲ್ಯಗಳನ್ನು, ಅವುಗಳ ಕ್ರಿಯೆಗಳ ಸ್ವರೂಪವನ್ನು ಅರಿಯುವುದರ ಜೊತೆಗೆ ಎಲ್ಲಾ ವರ್ಗಗಳ ಜನರ ನೋವನ್ನು ತನ್ನೊಳಗೆ ಇಳಿಸಿಕೊಂಡು ಜೀವಿಸುತ್ತಿದ್ದರು. ಈ ಕಾರಣದಿಂದಾಗಿ ಅವರ ದೃಷ್ಟಿಕೋನದಲ್ಲಿ ಅಖಂಡ ಪ್ರಜ್ಞೆಯು ಸದಾ ಜಾಗೃತವಾಗಿ ರುತ್ತಿತ್ತು. ಗಾಂಧೀಜಿಯವರ ತತ್ವ ಮತ್ತು ಸಿದ್ಧಾಂತಗಳೆಂದರೆ, ಏಕತೆಯ ವಿರುದ್ಧದ ಬಹುತ್ವ, ಪ್ರತ್ಯೇಕತೆಯ ಬದಲಾಗಿ ಸಹಬಾಳ್ವೆ ಮತ್ತು ಸಾಮರಸ್ಯದ ಜೀವನ ಎಂಬುದಾಗಿತ್ತು. ಅವರಲ್ಲಿದ್ದ ಇಂತಹ ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ಅವರನ್ನು ಇಪ್ಪತ್ತನೆಯ ಶತಮಾನದ ಜಗತ್ತು ದಾರ್ಶನಿಕನ ಸ್ಥಾನಕ್ಕೇರಿಸಿತು. ಭಾರತದ ಸ್ವಾತಂತ್ರ್ಯದ ಜೊತೆಯಲ್ಲಿ ಅವರು ಕೈಗೊಂಡ ಹರಿಜನೋದ್ಧಾರ ಕಾರ್ಯಕ್ರಮವನ್ನು ಒಂದು ವೃತದಂತೆ ಪಾಲಿಸಿದ ಮಹಾತ್ಮನ ಮನೋಧರ್ಮವನ್ನು ನಾವ್ಯಾರು ಪರಿಪೂರ್ಣವಾಗಿ ಅರಿಯಲಿಲ್ಲ. ಅವರ ಶಿಕ್ಷಣ, ಕೃಷಿ, ಕೈಗಾರಿಕೆ, ಆರೋಗ್ಯ, ಗ್ರಾಮಾಭಿವೃದ್ಧಿ ಇವುಗಳಲ್ಲಿ ಅಪ್ಪಟ ದೇಶಿ ಚಿಂತನೆ ಎದ್ದು ಕಾಣುತ್ತಿತ್ತು.

ಪೂನಾ ಒಪ್ಪಂದದ ವಿಷಯದಲ್ಲಿ ಗಾಂಧೀಜಿ ತೆಗೆದುಕೊಂಡ ತೀರ್ಮಾನ ನಮಗೆ ವೈರುಧ್ಯದಂತೆ ಕಂಡು ಬರುತ್ತದೆ ನಿಜ. ಆದರೆ, ಅವರಿಗೆ ಬ್ರಿಟೀಷರ ಒಡೆದು ಆಳುವ ನೀತಿಯ ಕುರಿತಂತೆ ಎಚ್ಚರವಿತ್ತು. ಭಾರತದ ಮೇಲಿನ ಹಿಡಿತವನ್ನು ಸುಧೀರ್ಘಗೊಳಿಸುವ ನಿಟ್ಟಿನಲ್ಲಿ ಬ್ರಿಟಿಷರು ಮುಸ್ಲಿಂರನ್ನು ಎತ್ತಿ ಕಟ್ಟಿ ಪ್ರತ್ಯೇಕ ರಾಷ್ಟ್ರಕ್ಕೆ ಒತ್ತಾಯಿಸುವ ರೀತಿಯಲ್ಲಿ ಮಾಡಿದಂತೆ ದಲಿತರನ್ನು ಪ್ರತ್ಯೇಕಿಸಿ ಅವರಿಂದ ಪಾಕಿಸ್ತಾನ ಮಾದರಿಯಲ್ಲಿ ದಲಿತಸ್ತಾನ ಮಾಡುವರೆಂಬ ಆತಂಕ ಅವರಲ್ಲಿತ್ತು. ಭಾರತ ಪಾಕ್ ವಿಭಜನೆಯನ್ನು ಅವರು ವಿರೋಧಿಸಿದ ಹಿನ್ನಲೆಯಲ್ಲಿ ಹಿಂದೂ–ಮುಸ್ಲಿಂರು ಸಹೋದರರರಂತೆ ಬದುಕಬೇಕೆಂಬುದು ಅವರ ಆಸೆಯಾಗಿತ್ತು. ಅದೇ ರೀತಿಯಲ್ಲಿ ಭಾರತದಲ್ಲಿ ಅಸ್ಪೃಶ್ಯತೆಯು ತೊಲಗಿ ಸವರ್ಣಿಯರು ಮತ್ತು ದಲಿತರು ಒಟ್ಟಾಗಿ ಬಾಳುವುದು ಅವರ ಕನಸಾಗಿತ್ತೇ ಹೊರತು ಅವರಿಗೆ ಬೇರ್ಯಾವ ಮಹಾದಾಸೆ ಇರಲಿಲ್ಲ. ಇದ್ದಿದ್ದರೆ, ಅಧಿಕಾರದ ವ್ಯಾಮೋಹವನ್ನು ತೊರೆದು, ತುಂಡು ಬಟ್ಟೆಯ ಫಕೀರನಂತೆ, ಅಶಾಂತ ಸಂತನಂತೆ ಅವರು ಹರಿಜನರ ಕೇರಿಗಳಲ್ಲಿ ಮಲಗಿ, ಅಲ್ಲಿನ ರಸ್ತೆಗಳಲ್ಲಿ ಮಲ ಬಳಿದು, ಕಸ ತೆಗೆದು ಬದುಕ ಬೇಕಿರಲಿಲ್ಲ.

ಗಾಂಧೀಜಿಯವರಿಗೆ ಮೊದಲು ಬ್ರಿಟಿಷರಿಂದ ಬಿಡುಗಡೆ ಮೊದಲ ಆದ್ಯತೆಯಾಗಿತ್ತು. ಆನಂತರ ಒಳಗಿನ ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಬಗ್ಗೆ ವಿಶ್ವಾಸವಿತ್ತು. ಆದರೆ, ಅಂಬೇಡ್ಕರ್ ಅವರಿಗೆ ಸ್ವಾತಂತ್ರ್ಯಕ್ಕಿಂತ ಮುಖ್ಯವಾಗಿ ಈ ದೇಶದ ಮೇಲ್ಜಾತಿಯವರಿಂದ ಬಿಡುಗಡೆ ಬೇಕಾಗಿತ್ತು. ಮೇಲು ನೋಟಕ್ಕೆ ವಿಭಿನ್ನ ಬಗೆಯ ಚಿಂತನೆಗಳು ಎನಿಸಿದರೂ ಸಹ, ಇಬ್ಬರ ಗುರಿಯು ದೀನ ದಲಿತರ ಮತ್ತು ದಮನಿತರ ಬಿಡುಗಡೆಯ ಪರವಾಗಿತ್ತು ಎಂಬುದನ್ನು ನಾವು ಮರೆಯಬಾರದು.

ಅನ್ವೇಷಿಯ ಟಿಪ್ಪಣಿ

ನಾನು ಕಂಡ ಅಪರೂಪದ ವ್ಯಕ್ತಿ ಅಪರ್ಣಾ ಕೃಷ್ಣನ್

– ಸುಮನಸ ಕೌಲಗಿ

ಇಂದು ಇಂಟರ್ನೆಟ್ ಹಾಗು ಫೇಸ್‌ಬುಕ್‌ನಂತಹ ಮಾಧ್ಯಮಗಳಿಂದಾಗುತ್ತಿರುವ ಅವಘಡಗಳ ಬಗ್ಗೆ ಮಾತುಗಳು ಹೆಚ್ಚಾಗಿ ಕೇಳಿ ಬರುತ್ತಿದೆ. ತಂತ್ರಜ್ಞಾನವನ್ನು ದೂರುವುದರ ಬದಲು ಅವುಗಳನ್ನು ಹೇಗೆ ಬಳಿಸಿ ಕೊಳ್ಳುತ್ತೇವೆ ಎಂಬುದರ ಮೇಲೆ ಅದರ ಒಳಿತು ಕೆಡಕುಗಳು ನಿಂತಿವೆ ಎಂಬುದು ನನ್ನ ನಂಬಿಕೆ. ನಾನು ಇಲ್ಲಿ ಪರಿಚಯ ಮಾಡಲು ಹೊರಟಿರುವ ಅಪರ್ಣಾ ಕೃಷ್ಣನ್ ನನಗೆ ಪರಿಚಯವಾದದ್ದೇ ಫೇಸ್‌ಬುಕ್ಕಿನ ಮೂಲಕ. ಒಂದು ದಿನ ಫೇಸ್‌ಬುಕ್ಕಿನಲ್ಲಿ ಅವರು ಬರೆದಿದ್ದ ತಮ್ಮ ಹಳ್ಳಿಯ ಕಥೆಯನ್ನು ಕಂಡೆ. ಅವರ ಪ್ರೊಫೈಲ್‌ನ್ನು ತೆಗೆದಾಗ ಹತ್ತಾರು ಹಳ್ಳಿಯ ಕಥೆಗಳು ಹಾಗೂ ಸರಳ ಜೀವನ ಶೈಲಿಯ ಅಗತ್ಯತೆಯ ಬಗೆಗಿನ ಅವರ ಬರವಣಿಗೆಗಳು ಕಂಡು ಬಂದವು. ಜೀವನ ಶೈಲಿಯನ್ನು ಪ್ರಶ್ನಿಸಿಯೇ ಕೊಳ್ಳದ ಕಾಲಘಟ್ಟದಲ್ಲಿ ಇಷ್ಟರ ಮಟ್ಟಿಗೆ ಸರಳ ಜೀವನ ಹಾಗು ಹಳ್ಳಿಯ ಜೀವನವನ್ನು ವಹಿಸಿಕೊಂಡು ಮಾತಾಡುವ ಇವರ ಬಗ್ಗೆ ಕುತೂಹಲ ಉಂಟಾಗಿ ಫೇಸ್‌ಬುಕ್ಕಿನಲ್ಲಿ ಗೆಳೆತನ ಮಾಡಿಕೊಂಡೆ. ನಂತರ ಅವರನ್ನು ಮುಖತ: ಭೇಟಿ ಮಾಡಲು ವರ್ಷವೇ ಹಿಡಿಯಿತು. ಎರಡು ತಿಂಗಳ ಹಿಂದೆ ಅವರನ್ನು ಭೇಟಿ ಮಾಡಲೇ ಬೇಕೆಂದು ತೀರ್ಮಾನಿಸಿ ತಿರುಪತಿ ಬಳಿಯ ಪಾಲಗುಟ್ಟಪಳ್ಳಿ (ದಲಿತವಾಡ) ಎಂಬ ಅವರ ಹಳ್ಳಿಗೆ ಹೊರಟೆ. ಮೈಸೂರಿನಿಂದ ತಿರುಪತಿಗೆ ರೈಲನ್ನು ಹಿಡಿದು ಅಲ್ಲಿಂದ ಬಸ್ಸಿನ ಸವಾರಿ ಮಾಡಿ ಕಡೆಗೆ ೩ ಸೀಟಿನ ಆಟೋದಲ್ಲಿ ೧೦ ಜನ ೧೨ ಜನ ತುಂಬಿರುವ ಆಟೋ ಹಿಡಿದು ಅವರ ಹಳ್ಳಿಗೆ ತಲುಪಿದೆ. ಹಳ್ಳಿಯಲ್ಲಿ ಇಳಿದಾಕ್ಷಣ ಒಬ್ಬ ಸಣ್ಣ ಹುಡುಗಿ ಅವಳ ಸ್ನೇಹಿತರೊಡನೆ ನನ್ನನ್ನು ಕರೆದೊಯ್ಯಲು ಬಂದಳು. ತೆಲಗು ಭಾಷೆ ಬರದ ನನಗೆ ಅವರೊಡನೆ ಹೇಗೆ ಮಾತನಾಡುವುದೆಂಬ ಕಳವಳ. ಅಷ್ಟರಲ್ಲಿ are you sumanas? ಎಂಬ ಕೂಗು ಕೇಳಿಬಂತು.

ಹೆಚ್ಚಾಗಿ ಇಂಗ್ಲೀಷ್ ಭಾಷೆಯನ್ನು ಮಾತನಾಡುವ ಆಧುನಿಕ ಜೀವನ ಶೈಲಿಯ ಜನರ ಪರಿಚಯ ಇರುವ ನನಗೆ ಈ ಕುಗ್ರಾಮದಲ್ಲಿ ಒಂದು ಪುಟ್ಟ ಹಳ್ಳಿಯ ಹುಡುಗಿ ನಿರರ್ಗಳವಾಗಿ ಇಂಗ್ಲೀಷ್‌ನಲ್ಲಿ ಮಾತನಾಡಿದ್ದು ಕಂಡು ಒಂದು ಕ್ಷಣ ನಾನು ಕಕ್ಕಾಬಿಕ್ಕಿಯಾದೆ. ಅವಳೊಡನೆ ಮಾತನಾಡುತ್ತ ಅಪರ್ಣಾಅವರ ಮನೆಯ ಕಡೆಗೆ

ನಡೆದೆ. ದಾರಿಯಲ್ಲಿ ಅವಳ ಹೆಸರು ತುರಿಯ ಹಾಗು ಅವಳು ಅಪರ್ಣಾರವರ ಮಗಳು ಎಂದು ತಿಳಿಯಿತು. ಅವಳ ಇಂಗ್ಲೀಷ್ ಬಾಷೆಯ ಮೇಲಿನ ಹಿಡಿತವನ್ನು ಕಂಡು ಬೆರಗಾದೆ. ಸ್ವಲ್ಪ ದೂರ ಕ್ರಮಿಸಿದ ನಂತರ ಒಂದು ಸಣ್ಣ ಮಣ್ಣಿನ ಗುಡಿಸಿಲಿನ ಹೊರಗೆ ಒಬ್ಬ ಮಹಿಳೆ ನಮಗಾಗಿ ಕಾಯುತ್ತಿರುವುದನ್ನು ಕಂಡೆ. ಫೇಸ್‌ಬುಕ್‌ನಲ್ಲಿ ಅಪರ್ಣಾ ಅವರ ಮುಖವನ್ನು ನೋಡಿದ್ದ ನನಗೆ ಅವರೇ ಅಪರ್ಣಾ ಎಂದು ತಿಳಿಯಿತು. ಎರಡು ನಿಮಿಷ ನನ್ನ ಪ್ರಯಾಣದ ಬಗ್ಗೆ ಮಾತನಾಡಿ ಮನೆಯ ಒಳಗೆ ನಡೆದವು.

ಸಗಣಿಯಿಂದ ಸಾರಿಸಿದ ನೆಲ, ಒಂಬೆರಡು ಚಾಪೆ ಹಾಗು ಸೌದೆ ಒಲೆಯ ಮೇಲೆ ಅಡುಗೆ ಮಾಡಲು ಒಂದಿಷ್ಟು ಮಡಿಕೆಗಳನ್ನು ಬಿಟ್ಟರೆ ಬೇರೇನು ಅವರ ಮನೆಯಲ್ಲಿ ಕಾಣಲಿಲ್ಲ. ಇದನ್ನು ಕಂಡ ನನಗೆ ಇಷ್ಟೊಂದು ಸರಳವಾಗಿ ಬದುಕುತ್ತಿರುವುದನ್ನು ಕಂಡು ಆಶ್ಚರ್ಯವಾಯಿತು. ಅಲ್ಲಿಂದ ಅವರ ಹಳ್ಳಿಯನ್ನು ನೋಡಲೆಂದು ಅವರೊಡನೆ ಹೊರಟೆ. ಹೆಚ್ಚಿನ ಮನೆಗಳು ಬಹಳ ಚಿಕ್ಕದಾಗಿದ್ದು ಒಂದೇ ಕೋಣೆಯಿದ್ದು ಅಲ್ಲಿಯೇ ಮನೆಯವರು ಅಡುಗೆ ಮಡುವುದು, ಮಲಗುವುದು ಹಾಗು ಹರಟೆ ಹೊಡೆಯುವುದನ್ನು ಕಂಡೆ. ವಿಶಾಲವಾದ ಮನೆಯಲ್ಲಿ ಬೆಳೆದ ನನಗೆ ಬೆಂಕಿ ಪೊಟ್ಟಣದಂತಹ ಮನೆಗಳಲ್ಲಿ ಹೇಗೆ ಬದುಕುತ್ತಾರೆ ಎಂಬ ಪ್ರಶ್ನೆ ಕಾಡತೊಡಗಿತು. ಹಳ್ಳಿಗರೆಲ್ಲರೂ 'ಅಪರ್ಣಮ್ಮ' ಎಂದು ಕೂಗುತ್ತ ತಮ್ಮ ತಮ್ಮ ಮನೆಗೆ ಬಹಳ ಪ್ರೀತಿಯಿಂದ ಕರೆಯುತ್ತಿದ್ದರು. ಒಂದಿಷ್ಟು ಜನ ತಾವು ಅಡುಗೆ ಮಾಡಿದ ಸಾರು-ಪಲ್ಯಗಳನ್ನು ಬಲವಂತವಾಗಿ ಮನೆಗೆ ತೆಗೆದು ಕೊಂಡು ಹೋಗಲು ಕೊಟ್ಟರು. ಅಪರ್ಣಾಅವರನ್ನು ಅಲ್ಲಿಯ ಸಮುದಾಯ ಅಷ್ಟರ ಮಟ್ಟಿಗೆ ಸ್ವೀಕರಿಸಿರುವುದನ್ನು ಕಂಡು ಆಶ್ಚರ್ಯವಾಯಿತು. ಅವರೊಡನೆ ಅವರ ಹಳ್ಳಿಯ ಜೀವನದ ಬಗ್ಗೆ, ಗಾಂಧಿ, ಅಂಬೇಡ್ಕರ್, ಕುಮಾರಪ್ಪ, ಧರ್ಮಪಾಲ್, ಆಧ್ಯಾತ್ಮ ಮುಂತಾದ ಹಲವಾರು ವಿಚಾರಗಳ ಬಗ್ಗೆ ಮಾತನಾಡಿದೆ.

ಅಪರ್ಣಾ ಅವರು ಬೆಂಗಳೂರಿನ ಪ್ರತಿಷ್ಠಿತ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ಪದವಿಯನ್ನು ಪಡೆದು ಸಮಾಜಮುಖಿ ಕೆಲಸಗಳಲ್ಲಿ ತೊಡಗಿಕೊಂಡವರು. ಮೊದಲಿಗೆ ಕೆಲವು ವರ್ಷ ನರ್ಮದಾ ಬಚಾವ್ ಆಂದೋಲನದಲ್ಲಿ ಮೇಧಾ ಪಾಟ್ಕರ್ ಅವರೊಂದಿಗೆ ಸಕ್ರೀಯವಾಗಿ ಭಾಗವಹಿಸಿದವರು. ಒಂದು ಕಡೆ ಬೃಹತ್ ಅಣೆಕಟ್ಟನ್ನು ವಿರೋಧಿಸುತ್ತ ಮತ್ತೊಂದು ಕಡೆ ಅದರಿಂದ ತಯಾರಾಗುವ ವಿದ್ಯುತ್ತಿನ ಮೇಲೆ ಅವಲಂಬಿತವಾಗಿರುವ ತಮ್ಮ ಜೀವನ ಶೈಲಿಯ ವಿರೋಧಾಭಾಸವನ್ನು ಕಂಡು, ನೈತಿಕತೆಯ ಸರಳ ಜೀವನದ ಕಡೆಗೆ ಮುಖಮಾಡಿ ನಿಂತವರು. ಗಾಂಧೀಜಿಯ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯಿಂದ ಪ್ರೇರೇಪಿತಗೊಂಡು,

ಆ ಕನಸನ್ನು ಸಾಕಾರಗೊಳಿಸಲೆಂದು 'ದಲಿತವಾಡ' ಎಂಬ ಸಣ್ಣ ಗ್ರಾಮಕ್ಕೆ ಬಂದು ಕಳೆದ ಎರಡು ದಶಕಗಳಿಂದ ಹಳ್ಳಿಗರಲ್ಲಿ ಒಬ್ಬರಾಗಿ ಬದುಕುತ್ತಿದ್ದಾರೆ.

ದಲಿತವಾಡವು ಕೇವಲ ೫೦ ಮನೆಗಳನ್ನು ಹೊಂದಿರುವ ಸಣ್ಣ ಹಳ್ಳಿ. ದಲಿತ ಸಮುದಾಯವನ್ನು ಬಿಟ್ಟು ಬೇರೆ ಯಾವ ಸಮುದಾಯವೂ ಈ ಊರಿನಲ್ಲಿಲ್ಲ. ಕೆಲವು ದಶಕಗಳ ಹಿಂದೆ ಮಣ್ಣಿನ ಮನೆಗಳಿಂದ ಕೂಡಿದ್ದ ಊರು ಇಂದು ಅಭಿವೃದ್ಧಿಯ ಹೆಸರಿನಲ್ಲಿ ಕಾಂಕ್ರೀಟ್ ಮಯವಾಗುತ್ತಿದೆ. ಹಳ್ಳಿಗೆ ಬೈಕ್, ಮೊಬೈಲ್‌ನಂತಹ ಆಧುನಿಕ ತಂತ್ರಜ್ಞಾನಗಳು ಲಗ್ಗೆ ಇಟ್ಟಿವೆ. ಹೋಗಿ ಬೇರೆಲ್ಲಾ ಹಳ್ಳಿಗಳಂತೆ ಈ

ಯುವಕರೂ ನಗರದ ಕಡೆಗೆ ಮುಖಮಾಡಿ ನಿಂತಿದ್ದಾರೆ. ಈ ಹಳ್ಳಿಯೂ ಕೂಡ ವೃದ್ಧಾಶ್ರಮದ ಹಾದಿಯನ್ನು ಹಿಡಿಯುತ್ತಿದೆ. ಹೆಚ್ಚಿನ ಜನ ಕೂಲಿ ಕೆಲಸವನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಅನೇಕ ಕುಟುಂಬಗಳ ಆದಾಯವು ಐದು ಸಾವಿರ ರುಪಾಯಿಗಳಿಗಿಂತ ಕಡಿಮೆ. ಹೆಚ್ಚಿನ ಸಮಯ ಅನಿರೀಕ್ಷಿತ ಸಮಸ್ಯೆಗಳಿಗೆ ಸಿಲುಕಿದಾಗ ಇಡೀ ಕುಟುಂಬವೇ ನಿಸ್ಸಾಹಾಯಕವಾಗಿ ನಿಲ್ಲುವ ಸಂದರ್ಭವೇ ಹೆಚ್ಚು. ನಾವೆಲ್ಲರೂ ಸಮಾಜ ಸುಧಾರಣಾ ಕೆಲಸಗಳನ್ನು ಸರ್ಕಾರವೋ ಅಥವ ಸಂಸ್ಥೆಗಳೋ ಮಾಡಬೇಕೆನ್ನುವ ಕಾಲಘಟ್ಟದಲ್ಲಿ ಅಪರ್ಣಾ ಅವರು ಇಂತಹ ಸಮಸ್ಯೆಗಳಿಗೆ ಒಬ್ಬ ವ್ಯಕ್ತಿಯಾಗಿ ಪರಿಹಾರವನ್ನು ಒದಗಿಸುತ್ತಿರುವುದು ನಮಗೆಲ್ಲಾ ಸ್ಫೂರ್ತಿದಾಯಕವಾದ ವಿಚಾರವೆ ಸರಿ.

ಅವರ ಮೊದಲ ಕೆಲವು ವರ್ಷಗಳು ಹಳ್ಳಿಯ ಮಕ್ಕಳಿಗೆ ಪಾಠವನ್ನು ಹೇಳಿಕೊಡುತ್ತ ಹಳ್ಳಿಗರಿಗೆ ಹತ್ತಿರವಾದರು. ಆಧುನಿಕ ಶಿಕ್ಷಣ ಕ್ರಮದಲ್ಲಿ ನಂಬಿಕೆ ಇಲ್ಲದ ಅಪರ್ಣಾ ದಂಪತಿಗಳು ಮಗಳು ತುರಿಯಾಳನ್ನು ಹಳ್ಳಿಯಲ್ಲಿಯೇ ಬೆಳೆಸಿ, ಹಳ್ಳಿಯ ಜನರೊಡನೆ ಬದುಕಿನ ಪಾಠಗಳನ್ನು ಕಲಿಯುವ ಅವಕಾಶವನ್ನು ನೀಡಿದರು. ಇಂದು ಅವಳು ತೆಲಗು, ತಮಿಳು, ಇಂಗ್ಲೀಷ್ ಹಾಗು ಸಂಸ್ಕೃತ ಭಾಷೆಗಳಲ್ಲಿ ಚೆನ್ನಾಗಿ ಬರೆಯುವುದು ಓದುವುದನ್ನು ಕಲಿತಿದ್ದು ಮುಂದೆ ಸಂಸ್ಕೃತ ಶಿಕ್ಷಕಿಯಾಗುವ ಗುರಿಯನ್ನು ಇಟ್ಟುಕೊಂಡಿದ್ದಾಳೆ. ತುರಿಯ ಎಂಬ ಹೆಸರಿನ ಅರ್ಥವು ಅಪರ್ಣಾ ಅವರ ಜೀವನದ ಉದ್ದೇಶವನ್ನು ತಿಳಿಸುತ್ತದೆ ಎನಿಸುತ್ತದೆ. ತುರಿಯ ಒಂದು ಸಂಸ್ಕೃತ ಶಬ್ದ. ಅದ್ವೈತ ಸಿದ್ಧಾಂತದ ಪ್ರಕಾರ ತುರಿಯ ಎಂದರೆ ಅತ್ಯಂತ ಮೇಲಸ್ತರದ ಪ್ರಜ್ಞೆ. ಈ ಸ್ಥಿತಿಯಲ್ಲಿ ಒಬ್ಬ ಮನುಷ್ಯನು ಬೇರೊಬ್ಬರಿಗೆ ನಿಸ್ವಾರ್ಥ ಸೇವೆಯನ್ನು ಮಾಡುತ್ತ ಸತ್ಯದ ಅರಿವನ್ನು ಪಡಿಯುವುದು ಎಂಬುದಾಗಿದೆ. ಇದನ್ನು ಅಪರ್ಣಾ ದಂಪತಿಗಳು ಎಷ್ಟು ಸಾಧ್ಯವೋ ಅಷ್ಟು ಬದುಕಿನಲ್ಲಿ ಮಾಡುತ್ತಾ ಬಂದಿದ್ದಾರೆ.

ಹಳ್ಳಿಯ ಮಕ್ಕಳಲ್ಲಿ ಪೌಷ್ಠಿಕತೆಯ ಕೊರತೆಯನ್ನು ಕಂಡು ತಮ್ಮ ಸ್ನೇಹಿತರ ಸಹಾಯದಿಂದ ಅಲ್ಲಿಯ ಸರ್ಕಾರಿ ಶಾಲೆಯಲ್ಲಿ ಪ್ರತಿದಿನವು ಕಷಾಯವನ್ನು ಒದಗಿಸುವ

ಕೆಲಸವನ್ನು ಮಾಡಿದ್ದಾರೆ. ಇದರಿಂದಾಗಿ ಮಕ್ಕಳ ಭೌತಿಕ ಬೆಳವಣಿಗೆಯ ಜೊತೆಗೆ ದೈಹಿಕ ಆರೋಗ್ಯವೂ ಸುಧಾರಿಸಿದೆ. ಹೆಚ್ಚಿನ ಸಲ ಆರೋಗ್ಯವು ಹದಗೆಟ್ಟಾಗ ಬಡತನದಿಂದಾಗಿ ಹಳ್ಳಿಯ ಜನರು ಔಷಧಿಯನ್ನು ಕೊಳ್ಳಲಾಗದೇ ನಿಲ್ಲುವುದನ್ನು ಕಂಡು ತಮ್ಮ ಒಬ್ಬ ಆಯುರ್ವೇದ ವೈದ್ಯರ ಸ್ನೇಹಿತರಿಂದ ಕೆಲವು ಸಾಮಾನ್ಯ ಖಾಯಿಲೆಗೆ ಮನೆ ಮದ್ದುಗಳನ್ನು ಕಲಿತು ಹಳ್ಳಿಯ ಒಬ್ಬ ಹೆಂಗಸಿಗೆ ಅದನ್ನು ಹೇಳಿಕೊಟ್ಟಿದ್ದಾರೆ. ಇಂದು ಹಳ್ಳಿಗರಿಗೆ ಪ್ರಾಥಮಿಕ ಹಂತದ ಆರೋಗ್ಯ ಸಮಸ್ಯೆ ಏನಿದ್ದರೂ ಆ ಹೆಂಗಸಿನ ಬಳಿ ಹೋಗಿ ಉಚಿತವಾಗಿ ಔಷಧಿಯನ್ನು ತೆಗೆದುಕೊಳ್ಳುತ್ತಾರೆ. ಇದರಿಂದ ಹಳ್ಳಿಗರ ಆರೋಗ್ಯದ ಸಮಸ್ಯೆಗೆ ಒಂದು ಮಟ್ಟಕ್ಕೆ ಪರಿಹಾರ ದೊರಕಿದೆ.

ಇದಲ್ಲದೆ ಹಳ್ಳಿಗರ ವ್ಯಕ್ತಿಗತ ಸಮಸ್ಯೆಗಳಿಗೆ ಅಪರ್ಣಾ ಸ್ಪಂದಿಸುತ್ತಾ ಬಂದಿರುವುದು ವಿಶೇಷ. ಬಡತನದಿಂದಾಗಿ ಮಕ್ಕಳನ್ನು ಓದಿಸಲಾಗದ ಸಂದರ್ಭದಲ್ಲಿ ಅವರಿಗೆ ಸಹಾಯವನ್ನು ಮಾಡುತ್ತಾ ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡುವಂತಾಗಿದೆ. ಒಮ್ಮೆ ಹಳ್ಳಿಯ ಒಬ್ಬ ವೃದ್ಧ ರಸ್ತೆಯಲ್ಲಿ ಹೋಗುವಾಗ ಹಿಂದಿನಿಂದ ಬಂದ ವಾಹನವು ಅವನಿಗೆ ಗುದ್ದಿ ಒಂದು ಕಾಲನ್ನು ಕಳೆದು ಕೊಳ್ಳುವಂತಾಯಿತು. ಅವನಿಗಿದ್ದ ಆಸ್ತಿಯೆಂದರೆ ಒಂದು ಹಸು ಮತ್ತು ಒಂದು ಪುಟ್ಟ ಮನೆ. ಕಾಲಿಲ್ಲದೆ ಅವನು ಹಸುವನ್ನು ಮೇಯಿಸಲಾಗದೇ ಬದುಕುವುದು ಕಷ್ಟವಾದ ಸಂದರ್ಭದಲ್ಲಿ ಅಪರ್ಣಾ ಈ ಕತೆಯನ್ನು ಫೇಸ್‌ಬುಕ್‌ನಲ್ಲಿ ಸಹಾಯವನ್ನು ಕೋರಿದಾಗ ಯಾರೋ ಒಬ್ಬ ದಿಲ್ಲಿಯ ಹೆಂಗಸು ಮುಂದೆ ಬಂದು ಆ ವ್ಯಕ್ತಿಗೆ ಕೃತಕ ಕಾಲನ್ನು ಹಾಕಿಸಿ ಕೊಳ್ಳಲು ಸಹಾಯ ಮಾಡಿ ಮತ್ತೆ ಅವನ ಕಾಲ ಮೇಲೆ ಅವನು ನಿಲ್ಲುವಂತೆ ಮಾಡಿದ್ದಾರೆ. ಈ ರೀತಿಯ ಹತ್ತಾರು ಕಥೆಗಳು ಅವರಿಂದ ಹಾಗು ಹಳ್ಳಿಗರಿಂದ ಕೇಳಿಬರುತ್ತದೆ. ಬರಗಾಲದಿಂದ ಕೂಲಿ ಕೆಲಸವು ದೊರಕದೆ ಹಳ್ಳಿಯ ಹೆಂಗಸರು ಒಂದು ಹೊತ್ತಿನ ಊಟಕ್ಕೂ ಕಷ್ಟಪಡುತ್ತಿದ್ದಾಗ ಅವರ ಕೈಯಲ್ಲಿ ಕೈ ಚೀಲಗಳನ್ನು ಹೊಲಸಿ ತಮ್ಮ ಬರಹದ ಕೈಚಳಕದಿಂದ ಸೋಷಿಯಲ್ ಮೀಡಿಯಾಗಳ ಮೂಲಕ ಕೈ ಚೀಲಗಳಿಗೆ ಗ್ರಾಹಕರನ್ನು ಹುಡುಕಿ ಹತ್ತಾರು ಮನೆಗಳಿಗೆ ಮೂರು ಹೊತ್ತಿನ ಊಟ ದೊರಕುವಂತೆ ಮಾಡುತ್ತಿದ್ದಾರೆ. ಸಮಾಜದಲ್ಲಿಯ ನೈತಿಕತೆಯ ಕೊರತೆಯನ್ನು ಬಗೆಹರಿಸಲು ಪ್ರಯತ್ನಿಸುತ್ತಿರುವ ಅಪರ್ಣರಂತಹ ಅಪರೂಪದ ವ್ಯಕ್ತಿಯೊಡನೆ ಕಳೆದ ಎರಡು ದಿನಗಳು ನನ್ನ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಸಹಾಯವಾಗಿದೆ ಎಂದರೆ ತಪ್ಪಾಗಲಾರದು.

ಡಾ.ರುಕ್ಮಾಬಾಯಿ ಭಿಕಾಜಿ

ಡಾ ರುಕ್ಮಾಬಾಯಿ ಭಿಕಾಜಿ ೧೯ ನೇ ಶತಮಾನದಲ್ಲಿ ಮಹಿಳಾ ಹಕ್ಕಿಗಾಗಿ ಹೋರಾಡಿದ ಮಹಿಳೆ. ಹಾಗೆಯೇ ಆ ಕಾಲಘಟ್ಟದಲ್ಲಿ ಭಾರತೀಯ ವೈದ್ಯಕೀಯ ಕ್ಷೇತ್ರದಲ್ಲಿ ಹೊಸಗಾಳಿಯೊಂದು ಬೀಸುವಂತೆ ಮಾಡಿದ ವೀರ ಮಹಿಳೆ. ಆಕೆಯ ಬದುಕೇ ಹೋರಾಟದ ಬದುಕು. ೧೮೮೯ ರಲ್ಲಿ ವೈದ್ಯಶಾಸ್ತ್ರವನ್ನು ಓದಲು ಲಂಡನ್‌ಗೆ ಹೋಗಿ ೧೮೯೪ ರಲ್ಲಿ ವೈದ್ಯಳಾಗಿ ಹಿಂದಿರುಗಿ ಸೇವೆ ಸಲ್ಲಿಸಲು ಪ್ರಾರಂಭಿಸಿದ ರುಕ್ಮಾಬಾಯಿ ಭಾರತದ ಮೊದಲ ಮಹಿಳಾ ವೈದ್ಯಳಾಗಿ ಹೊರಹೊಮ್ಮಿದಳು.

೧೮೬೪ ನವೆಂಬರ್ ೨೨ ರಂದು ಜನಿಸಿದ ರುಕ್ಮಾಭಾಯಿಯ ತಂದೆ ತಾಯಿ ಜನಾರ್ಧನ ಮತ್ತು ಜಯಂತಿಬಾಯಿ. ಜನಾರ್ಧನ ಅವರ ನಿಧನದ ನಂತರ ಆ ಕಾಲಕ್ಕೆ ಅಪರೂಪವೆಂಬಂತೆ ಜಯಂತಿಬಾಯಿಯವರು ಶಕರಾಂ ಅರ್ಜುನ್ ಅವರನ್ನು ಮದುವೆಯಾದರು. ಅರ್ಜುನ್ ಅವರು ಮುಂಬೈನ ಗ್ರಾಂಡ್ ಮೆಡಿಕಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಆ ಕಾಲದ ನಿಯಮದಂತೆ ೧೧ ವರ್ಷದ ರುಕ್ಮಾ ಬಾಯಿಗೆ ೧೯ವರ್ಷದ ದಾದಾಜಿ ಭಿಕಾಜಿ ಅವರನ್ನು ಕೊಟ್ಟು ಮದುವೆ ಮಾಡಲಾಯಿತು. ಇನ್ನೂ ಬಾಲಕಿಯಾಗಿದ್ದ ರುಕ್ಮಾಬಾಯಿ ಮದುವೆಯಾದರೂ ತೌರು ಮನೆಯಲ್ಲೇ ಉಳಿದರು. ಆ ಸಮಯದಲ್ಲಿ ಆಕೆ ಸ್ವಧ್ಯಾಯ ಮತ್ತು ತನ್ನ ಬಲತಂದೆಯ ಮಾರ್ಗದರ್ಶನದಲ್ಲಿ ಜ್ಞಾನ ಸಂಪಾದನೆಯಲ್ಲಿ ತೊಡಗಿದರು. ಕೆಲ ವರ್ಷಗಳಲ್ಲಿ ಆಕೆಯ ಗಂಡ ದಾದಾಜಿ ಅವಳನ್ನು ತನ್ನ ಮನೆಗೆ ಬರಲು ಒತ್ತಾಯಿಸಿದರು. ಇನ್ನೂ ಶಾಲೆಯಲ್ಲಿದ್ದ ಬಾಲಕಿ ಗಂಡನ ಮನೆಗೆ ಹೋಗಲು ಒಪ್ಪಲಿಲ್ಲ.

ಗಂಡನ ಮನೆಗೆ ಬರಲು ಒಪ್ಪದಿದ್ದ ಹೆಂಡತಿಯ ವಿರುದ್ಧ ದಾದಾಜಿ ನ್ಯಾಯಾಲಯದ ಮೊರೆ ಹೊಕ್ಕರು. ೧೮೮೪ ರಲ್ಲಿ ಅತ್ಯಂತ ಪ್ರಚಾರ ಮತ್ತು ಸಾರ್ವಜನಿಕ ಬದುಕಿನ ಮೇಲೆ ಪ್ರಭಾವ ಬೀರಿದ ನ್ಯಾಯಾಲಯದ ವಿಚಾರಣೆ ಪ್ರಾರಂಭವಾಯಿತು.

೧೮೯೧ ರಲ್ಲಿ 'ಸಮ್ಮತಿಯ ಕನಿಷ್ಟ ಪ್ರಾಯ' ದ ಕಾನೂನಿನ ಜಾರಿಗೆ ಈ ಮೊಕದ್ದಮೆ ನಾಂದಿ ಆಯಿತು.

ಈ ಮೊಕದ್ದಮೆ ನಡೆಯುತ್ತಿದ್ದಾಗ ಸುಮ್ಮನೆ ಕೂರದ ರುಕ್ಮಾಬಾಯಿ 'ಟೈಮ್ಸ ಆಫ್ ಇಂಡಿಯಾ' ಪತ್ರಿಕೆಗೆ ಬೇರೆ ಹೆಸರಿನಲ್ಲಿ ಲೇಖನಗಳನ್ನು ಬರೆಯತೊಡಗಿದರು. ೧೮೮೪ ಜೂನ್ ೨೬ ರಂದು ಪ್ರಕಟಗೊಂಡ 'ಹಿಂದೂ ಮಹಿಳೆ' ಎಂಬ ಅವರ ಲೇಖನ ಸಮಾಜದಲ್ಲಿ ಹಿಂದೂ ಮಹಿಳೆಯ ಸ್ಥಾನದ ಬಗ್ಗೆ ಅನೇಕ ಪ್ರಶ್ನೆಗಳನ್ನು ಎತ್ತಿತ್ತು.

ಬಾಲ್ಯ ವಿವಾಹ ಎಂಬ ಕ್ರೂರ ಪದ್ಧತಿ ನನ್ನ ಬದುಕಿನ ಬಾಲ್ಯದ ಸಂತೋಷವನ್ನೇ ಕಸಿದುಕೊಂಡು ಬಿಟ್ಟಿತು. ಈ ಪದ್ಧತಿ ನಾನು ಅತ್ಯಂತ ಬೆಲೆ ಕೊಡುವ ಅಧ್ಯಯನ ಮತ್ತು ನನ್ನ ನಡುವೆ ದೊಡ್ಡ ಕಂದಕವಾಗಿ ಬಂದಿದೆ. ಯಾವುದೇ ತಪ್ಪು ಮಾಡಿಲ್ಲದ

ನನ್ನನ್ನು ಏಕಾಕಿ ತನಕ್ಕೆ ತಳ್ಳಿದೆ ; ನನ್ನ ಮುಗ್ಧ ಸಹೋದರಿಯರನ್ನು ಮೀರಿ ಮೇಲೇಳಬೇಕೆನ್ನುವ ನನ್ನ ಪ್ರತಿಯೊಂದು ಅಭಿಲಾಷೆಯನ್ನೂ ಅನುಮಾನದಿಂದ ತುಚ್ಛವಾಗಿ ಕಂಡು ಅದನ್ನು ಕಠೋರವಾಗಿ ವ್ಯಾಖ್ಯಾನಿಸಲಾಗುತ್ತಿದೆ.

ಕಡೆಗೆ ನ್ಯಾಯಾಲಯದ ಆದೇಶದ ನಂತರ ರುಕ್ಮಾಬಾಯಿಗೆ ತನ್ನ ಶಿಕ್ಷಣವನ್ನು ಮುಂದುವರೆಸಲು ಸ್ವತಂತ್ರ ಸಿಕ್ಕಂತಾಯಿತು. ಮುಂಬೈನ ಕಾಮಾ ಆಸ್ಪತ್ರೆಯ ನಿರ್ದೇಶಕರಾಗಿದ್ದ ಇಂಗ್ಲೆಂಡ್ನ ಎಡಿತ್ ಫಿಪ್ಸಾನ್ ಅವರ ಬೆಂಬಲ ಮತ್ತು ಮಾರ್ಗದರ್ಶನದಿಂದ ರುಕ್ಮಾಬಾಯಿ ಲಂಡಂನ್ ಸ್ಕೂಲ್ ಆಫ್ ಮೆಡಿಸಿನ್ ಅನ್ನು ೧೮೮೯ ರಲ್ಲಿ ಸೇರಿದರು. ಇಂಗ್ಲಂಡಿನಲ್ಲಿ ತಾನು ವಿದ್ಯಾರ್ಥಿಯಾಗಿದ್ದಾಗ ಗ್ಲಾಸಗೋ,ಬ್ರುಸೆಲ್ ಮತ್ತು ಎಡಿನ್ಬರೊಗಳನ್ನೂ ನೋಡಿದ ೧೮೯೪ ರಲ್ಲಿ ವೈದ್ಯಕೀಯ ಶಾಸ್ತ್ರದಲ್ಲಿ ಪದವಿಯನ್ನು ಪಡೆದರು.

೧೮೯೪ರಲ್ಲಿ ಭಾರತಕ್ಕೆ ಬಂದಾಗ ಆಕೆ ಮೊದಲ ವೃತ್ತಿಪರ ಮಹಿಳಾ ವೈದ್ಯೆಯಾಗಿದ್ದರು

ಆಕೆ ಮೊದಲು ಮುಂಬೈನಲ್ಲಿ ತನ್ನ ವೃತ್ತಿ ಪ್ರಾರಂಭಿಸಿದ ರುಕ್ಮಾಬಾಯಿ ೧೯೧೮ ರಿಂದ ೧೯೩೦ರವರಗೆ ಸೂರತ್‌ನಲ್ಲಿ ಕೆಲಸಮಾಡಿದರು. ರಾಜಕೋಟ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ಮುಖ್ಯ ವೈದ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಅಷ್ಟೇ ಅಲ್ಲ ರುಕ್ಮಾಬಾಯಿಯವರ ಮೂಲಕ ಘನತೆವೆತ್ತ ವೈದ್ಯಕೀಯ ಕ್ಷೇತ್ರದಲ್ಲಿ ಮಹಿಳೆಯರ ಪಾದಾರ್ಪಣೆ ಸಾಧ್ಯವಾಯಿತು. ಆಕೆ ಅಷ್ಟಕ್ಕೆ ನಿಲ್ಲದೆ ಬಾಲ್ಯವಿವಾಹ ಮತ್ತು ಮಹಿಳಾ ಹಕ್ಕುಗಳ ಮೇಲೆ ವ್ಯಾಪಕವಾಗಿ ಬರೆದರು.

ಡಾ. ರುಕ್ಮಾಬಾಯಿಯವದ್ದು ನಿಂತು ಹೋಗಿದ್ದ ಚರಿತ್ರಗೆ ಮತ್ತೆ ಚಾಲನೆ ನೀಡಿದ ಶೌರ್ಯದ ಸರಮಾಲೆಯ ಕತೆ. ಆಕೆ ತನ್ನ ಪ್ರತಿಯೊಂದು ಕನಸನ್ನು ಒಂದು ನಿರ್ಧರಿತ ನನಸಾಗಿಸುವ ಕಡೆಗೆ ಒಯ್ದರು. ಎಲ್ಲ ಸಂಪ್ರದಾಯವನ್ನು ಬದಿಗೊತ್ತಿ ಮೇಲದ್ದು, ತನ್ನ ಹಕ್ಕಿಗಾಗಿ ನಿಂತು, ಒಂದು ಹೊಸ ಪರಂಪರೆಯನ್ನು ಹುಟ್ಟುಹಾಕಿದರು. ಆಕೆಯ ಕತೆ ಬಹಳ ಜನರನ್ನು ತಲುಪಿರದೇ ಇರಬಹುದು ಆದರೆ ಆಕೆಯ ಕತೆ ಪ್ರೇರಣೆ ಪಡೆಯಬಯಸುವ ಮನಸ್ಸುಗಳಿಗೆ ಸದಾ ಇರುತ್ತದೆ.

ಸಂತಾಪ

ಹಿರಿಯ ಪತ್ರಿಕೋದ್ಯಮಿ, ಪತ್ರಕರ್ತ ಮತ್ತು ಮೈಸೂರಿನ ಆಂದೋಲನ ದಿನಪತ್ರಿಕೆಯ ಸಂಸ್ಥಾಪಕರು ಆಗಿದ್ದ ಶ್ರೀ ರಾಜಶೇಖರ ಕೋಟಿ ಅವರ ನಿಧನಕ್ಕೆ ಜನಪದ ವಿಚಾರ ಬಳಗ ಸಂತಾಪ ಸೂಚಿಸುತ್ತದೆ.

ನಿಲುವು

ಈ ದೇಶದ ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳು ತಯಾರಿಸಿ ಮಾರುವ ಉತ್ಪನ್ನಗಳನ್ನು ಜಿ ಎಸ್ ಟಿ ಯಿಂದ ಹೊರಗಿಡಬೇಕು ಎಂದು ಬೇಡಿಕೆ ಇಟ್ಟು ದೇಶಾದ್ಯಂತ ಚಳುವಳಿಗಳು ನಡೆದಿವೆ. ಸರ್ಕಾರ ೨೦ ಲಕ್ಷದ ಒಳಗಿನ ಯಾವ ವಹಿವಾಟಿಗೂ ಜಿ ಎಸ್ ಟಿ ಇಲ್ಲ, ಹಾಗಾಗಿ ಗ್ರಾಮೀಣ ಕುಶಲಕರ್ಮಿಗಳು ಚಿಂತಿತರಾಗುವ ಅಗತ್ಯವಿಲ್ಲ ಎಂದು ವಾದ ಮಾಡುತ್ತಿದೆ. ಮೊದಲ ನೋಟಕ್ಕೆ ಹೌದು, ತಪ್ಪೇನಿದೆ ಹೇಗಿದ್ದರೂ ಗ್ರಾಮೀಣ ಕುಶಲಕರ್ಮಿಗಳ ಉತ್ಪನ್ನ ೨೦ ಲಕ್ಷ ಮೀರದೆ ಇರುವುದರಿಂದ ಅವರೇಕೆ ಚಿಂತಿಸಬೇಕು ಎನಿಸುವುದು ಸಹಜ. ಆದರೆ ಜಿ ಎಸ್ ಟಿ ವಿರುದ್ಧದ ಹೋರಾಟಗಾರರು ಎತ್ತಿರುವ ಪ್ರಶ್ನೆ ಹೆಚ್ಚು ಮೂಲಭೂತವಾದದ್ದು ಮತ್ತು ಭವಿಷ್ಯದ ಕಷ್ಟದ ದಿನಗಳ ಬಗೆಗಿನ ಯೋಚನೆಯದ್ದು. ಈ ತೆರಿಗೆಯ ಕ್ರಮದಿಂದ ಭವಿಷ್ಯದಲ್ಲಿ ಸರ್ಕಾರಗಳು ಕುಶಲಕರ್ಮಿಗಳ ಉತ್ಪನ್ನಗಳಿಗೆ ಹಾಕಬಹುದಾದ ಲಗಾಮಿನ ಬಗೆಗಿನ ಚಿಂತೆ ಅವರದ್ದು. ಅವರು ಕೇಳುತ್ತಿರುವ ಪ್ರಶ್ನೆ ಬಹಳ ಸರಳವಾದದ್ದು. ಹರಿಯುವ ನೀರಿಗೆ ದೊಣ್ಣೆ ನಾಯಕನ ಅಪ್ಪಣೆ ಏಕೆ ಬೇಕು ? ಎಂಬುದು. ಹರಿಯುವ ನೀರನ್ನು ಕುಡಿಯಲು ಬರುವ ಒಬ್ಬ ವ್ಯಕ್ತಿಯು ಕುಡಿಯುವ ನೀರಿನ ಪ್ರಮಾಣಕ್ಕೆ ಅದರದೇ ಆದ ಮಿತಿ ಇದೆ. ಅವನು ತನ್ನ ಬಾಯಾರಿಕೆಗಿಂತ ಹೆಚ್ಚಿನ ನೀರನ್ನು ಕುಡಿಯಲಾರ. ಹಾಗಿರುವಾಗ ಅವನಿಗೆ ನೀನು ಒಂದು ಸಲಕ್ಕೆ ೧೦ ಲೀ ಗಿಂತ ಹೆಚ್ಚಿನ ನೀರನ್ನು ಕುಡಿಯಬಾರದು ಎಂದು ನಿಯಂತ್ರಣ ಹಾಕಿದರೆ ಏನು ಅರ್ಥ? ನಾನು ಹೇಗಿದ್ದರೂ ೧೦ ಲೀ ನೀರು ಕುಡಿಯುವುದಿಲ್ಲವಲ್ಲಾ ಎನ್ನುತ್ತಾ ನಿಬಂಧನೆಗೆ ಒಪ್ಪಿಕೊಂಡು ಬಿಡಬಹುದು. ಆದರೆ ಮುಂದೆ ? ಒಟ್ಟಿನಲ್ಲಿ ನಾನು ನೀರು ಕುಡಿಯುವ ಮರ್ಜಿಯನ್ನು ಪ್ರಭುತ್ವ ನಿಯಂತ್ರಿಸಲು ಒಪ್ಪಿಕೊಂಡಂತಾಯಿತು. ಮುಂದೆ ಅದು ೧೦ ಲೀ ನಿಂದ ೫ ಲೀ ಗೂ ನಂತರ ೧ ಲೀ ಗೂ ಕಡೆಗೂ ಅದೂ ಇಲ್ಲದ ದಿನಗಳು ಉಂಟಾಗಬಹುದು. ಮನುಷ್ಯ ತನ್ನ ದಾಹ ತಣಿಸಿ ಕೊಳ್ಳಲು ಕುಡಿಯುವ ನೀರಿಗೆ ಹೇಗೆ ತನ್ನದೇ ಆದ ಸಹಜ ನಿಯಂತ್ರಣ ಇದೆಯೋ ಹಾಗೆಯೇ ಒಬ್ಬ ಕುಶಲಕರ್ಮಿ ತನ್ನ ಕೈಯಿಂದ ತಯಾರಿಸುವ ಉತ್ಪನ್ನಗಳ ಉತ್ಪಾದನೆಗೂ ತನ್ನದೇ ಆದ ಸಹಜ ನಿಯಂತ್ರಣ ಇದೆ. ನಾನು ಹೆಚ್ಚಿನ ಹಣ ಕೊಡುತ್ತೇನೆ ಎಂದ ಮಾತ್ರಕ್ಕೆ ಒಬ್ಬ ನೇಕಾರ ಪ್ರತಿ ದಿನ ೫೦ ಮೀ ಬಟ್ಟೆ ನೇಯ್ದು ತಮಗೆ ಕೊಡಲಾರ. ಹಾಗಿದ್ದ ಮೇಲೆ ನಿಯಂತ್ರಣ ಏಕೆ ? ಶತ ಶತಮಾನಗಳಿಂದ ಕುಶಲಕರ್ಮಿಗಳು

ತಯಾರಿಸುವ ಉತ್ಪನ್ನದ ಉತ್ಪಾದನೆಗೆ ಮಿತಿ ಹೇರುವ ಕೆಲಸವನ್ನು ಯಾವುದೇ ಪ್ರಭುತ್ವ ಮಾಡಿಲ್ಲ. ಇನ್ನೂ ಒಂದು ಉದಾಹರಣೆ ಎಂದರೆ ಆಮೆಗೆ ನೀನು ಗಂಟೆಗೆ ೩೦ ಕಿಮೀ ಗಿಂತ ವೇಗದಲ್ಲಿ ಚಲಿಸುವಂತಿಲ್ಲ ಎಂಬ ನಿಬಂಧನೆಯನ್ನು ಹಾಕಿದಂತೆ. ಇದರಿಂದ ಆಮೆಗೇನು ತೊಂದರೆ ಎನಿಸಬಹುದು. ಆದರೆ ಪ್ರಭುತ್ವ ಆಮೆಯ ವೇಗವೂ ತನ್ನ ನಿಯಂತ್ರಣದಲ್ಲಿರಲಿ ಎಂದು ಯೋಚಿಸುತ್ತಿದೆ ಎಂದು ಅರ್ಥ. ಇಂದು ಜಿ ಎಸ್ ಟಿ ಕುಶಲಕರ್ಮಿಗಳಿಗೆ ಎಂತಹ ಪೆಟ್ಟನ್ನು ಕೊಟ್ಟಿದೆ ಎಂದರೆ ಕುಂಟುತ್ತಾ ಸಾಗಿದ್ದ ಕುದುರೆಯ ಮತ್ತೊಂದು ಕಾಲಿಗೆ ಊನ ಮಾಡಿದಂತೆ ಆಗಿದೆ. ಅವರು ಬಳಸುವ ಎಲ್ಲಾ ಕಚ್ಚಾ ಮಾಲಿಗೂ ಜಿ ಎಸ್ ಟಿ ಬಡಿಯಲಾಗಿದೆ. ಉಳ್ಳವರಿಗೆ ಕಂದಾಯ ಹಾಕಿ ಉಳ್ಳದವರ ಕಲ್ಯಾಣಕ್ಕೆ ಆ ಹಣವನ್ನು ಜನಸ್ನೇಹಿ ಸರ್ಕಾರ ಬಳಸಬೇಕು. ಉಳ್ಳದವರಿಗೇ ತೆರಿಗೆಯನ್ನು ಹಾಕುವುದು ಮಾನವೀಯ ಲಕ್ಷಣವಲ್ಲ. ನಾನು ಕಂಡಂತೆ ಕೈ ಮಗ್ಗದ ಬಿಡಿ ಭಾಗಗಳಿಗೆ ತೆರಿಗೆಯೇ ಇರಲಿಲ್ಲ. ಇದು ಗ್ರಾಮೀಣ ಕುಶಲಕರ್ಮಿ ಬಳಸುವ ಪದಾರ್ಥ ಅವನಿಗೆ ತೆರಿಗೆಯ ಹೊರೆ ಬೀಳಬಾರದು ಎಂದು ಸ್ವತಂತ್ರ ಬಂದಾಗಿನಿಂದಲೂ ಸರ್ಕಾರ ತೆರಿಗೆ ಹಾಕಿರಲಿಲ್ಲ. ಇದು ನೈತಿಕತೆಯ ಪ್ರಶ್ನೆ ಆಗಿತ್ತು. ಶ್ರಮ ಮಾಡಿ ಬದುಕುವವನ ಅನ್ನ ಕಸಿಯಬಾರದು ಎಂಬ ತತ್ವ ಅಡಗಿತ್ತು. ಇಂದು ನೇಕಾರ ಬಳಸುವ ಮಗ್ಗದ ಬಿಡಿ ಭಾಗಗಳಿಗೆ ಶೇ ೧೮ ರಿಂದ ೨೨ ಜಿ ಎಸ್ ಟಿ ಬಡಿಯಲಾಗಿದೆ. ಅವನು ಬಳಸುವ ೧೫೦ ರೂಪಾಯಿಯ ಲಾಳಿಗೆ ೩೦ ರೂ ತೆರಿಗೆ ನೀಡಬೇಕಿದೆ. ಅವನು ಬಳಸುವ ನೂಲಿಗೆ ಜಿ.ಎಸ್.ಟಿ ಬಿದ್ದಿದೆ. ಬನಾರಸಿನ ನೇಕಾರರು ಬಳಸುವ ಜರಿಗೆ ತೆರಿಗೆ ಹಾಕಲಾಗಿದೆ. ನಮ್ಮ ಚನ್ನಪಟ್ಟಣದ ಬೊಂಬೆ ತಯಾರಿಸುವವರು ಶೇ ೧೨ ತೆರಿಗೆಯನ್ನು ತಾವು ತಯಾರಿಸುವ ಬೊಂಬೆಗಳ ಮಾರಾಟದ ಮೇಲೆ ಗ್ರಾಹಕರಿಂದ ಪಡೆಯಬೇಕಿದೆ. ಅಸ್ಸಾಂ ರಾಜ್ಯದಲ್ಲಿ ಬಿದಿರಿನಿಂದ ದಿನೋಪಯೋಗಿ ವಸ್ತುಗಳನ್ನು ತಯಾರಿಸುವ ೪ ಲಕ್ಷ ಕುಶಲಕರ್ಮಿಗಳಿದ್ದಾರೆ. ಜಿ.ಎಸ್ ಟಿ ಯಿಂದಾಗಿ ಈ ಕುಶಲಕರ್ಮಿಗಳು ಕಚ್ಚಾ ಬಿದಿರಿಗೆ ಶೇ ೫ ತೆರಿಗೆಯನ್ನೂ ತಯಾರಾದ ಉತ್ಪನ್ನಕ್ಕೆ ಶೇ ೨೮ ತೆರಿಗೆಯನ್ನೂ ನೀಡಬೇಕಾಗಿ ಬಂದಿದೆ. ಅಲ್ಲಿಯ ವ್ಯಾಪಾರ ಅರ್ಧದಷ್ಟು ಕಡಿಮೆಯಾಗಿದೆ ಎಂದು ವ್ಯಾಪಾರಸ್ಥರು ಹೇಳುತ್ತಿದ್ದಾರೆ. ಜಿ.ಎಸ್.ಟಿ ತೆರಿಗೆ ಪದ್ಧತಿ ಅತ್ಯಂತ ವೈಜ್ಞಾನಿಕವಾಗಿದ್ದು ಪಾಶ್ಚಿಮಾತ್ಯ ದೇಶಗಳಲ್ಲಿ ಇದು ಬಹಳ ಯಶಸ್ವಿಯಾಗಿದೆ ಎಂದು ಹೇಳಲಾಗುತ್ತಿದೆ. ಪಾಶ್ಚಿಮಾತ್ಯ ದೇಶಗಳ ಪರಿಸ್ಥಿತಿಯೇ ಬೇರೆ, ನಮ್ಮ ದೇಶದ ಪರಿಸ್ಥಿತಿಯೇ ಬೇರೆ. ಪಾಶ್ಚಿಮಾತ್ಯ ದೇಶದ ಎಲ್ಲಾ ವ್ಯಾಪಾರವೂ ಕಂಪನಿಗಳ ಪಾಲಾಗಿದೆ. ಕುಶಲಕರ್ಮಿಗಳ ಸಂಖ್ಯೆ ಅತ್ಯಂತ

ಕಡಿಮೆ ಇದೆ. ಇಲ್ಲಿ ಕುಶಲಕರ್ಮಿಗಳದ್ದು ಜೀವನ ವಿಧಾನ. ಅಲ್ಲಿ ಕುಶಲಕರ್ಮ ಒಂದು ಹವ್ಯಾಸ. ಇಲ್ಲಿ ಕುಶಲಕರ್ಮ ಒಂದು ಸಂಸ್ಕೃತಿ. ಜಿ.ಎಸ್.ಟಿ ಯ ಮೂಲಕ ಕೇವಲ ಗ್ರಾಮೀಣ ಕುಶಲಕರ್ಮವನ್ನು ಮಾತ್ರವಲ್ಲ ಒಂದು ಸಂಸ್ಕೃತಿಯನ್ನೇ ನಾಶ ಮಾಡುತ್ತಿದ್ದೇವೆ. 'ಒಂದು ದೇಶ ಒಂದು ತೆರಿಗೆ' ಕೇಳಲು ಚೆನ್ನಾಗಿದೆ. ಸಾಮ್ಯವಾದದ ಘೋಷಣೆಯಂತೆ ಕಾಣುತ್ತದೆ. ಮುಂಬೈನ ಅಂಬಾನಿಯು ನಮ್ಮೂರಿನ ಅಂಕಾಚಾರಿಯೂ ಒಂದೇ ಎಂದು ತೆರಿಗೆ ಹೇಳುತ್ತಿದೆ. ದೇಶದ ಶೇಕಡಾ ೧ ಜನಸಂಖ್ಯೆಯ ಶ್ರೀಮಂತವರ್ಗ ದೇಶದ ಶೇ ೬೦ ಸಂಪತ್ತನ್ನು ಹೊಂದಿದೆ. ದೇಶದ ಶೇ ೯೨ ಜನ ಮಾಸಿಕ ೧೦,೦೦೦/- ಆದಾಯಕ್ಕಿಂತಲೂ ಕಮ್ಮಿ ಆದಾಯ ಹೊಂದಿದವರಾಗಿದ್ದಾರೆ. ಹೀಗಿದ್ದಾಗ 'ಒಂದು ದೇಶ ಒಂದು ತೆರಿಗೆ' ಎಂಬ ಮಾತು ನಗೆಪಾಟಲಾಗಿ ಕಾಣುತ್ತದೆ. ಇದು ಒಂದು ದೇಶ ಆಗಿಯೇ ಇಲ್ಲ. ಬಡವರ ಭಾರತ ಬೇರೆ, ಶ್ರೀಮಂತರ ಇಂಡಿಯಾ ಬೇರೆ. ಇಂತಹ ಪರಿಸ್ಥಿತಿಯಲ್ಲಿ ಜಿ ಎಸ್ ಟಿ ಬಡವರಿಗೆ ಮಾರಕವಾಗಿ ಪರಿಣಮಿಸಿದೆ. ಉತ್ಪನ್ನಗಳಿಗೆ ಮಾತ್ರವಲ್ಲ, ನಾಟಕಗಳಿಗೂ, ಸಂಗೀತ ಕಛೇರಿಗಳಿಗೂ ತೆರಿಗೆ ಎಂದಾದರೆ ಈ ದೇಶದ ಸಾಂಸ್ಕೃತಿಕ ವೈಭವ ಮುಂದುವರೆಯುವುದಾದರೂ ಹೇಗೆ ?

ಸ್ವಾವಲಂಬಿಗಳಾಗಿದ್ದು ಕೊಂಡು, ಸರ್ಕಾರಕ್ಕೆ ಯಾವುದೇ ತೊಂದರೆ ಕೊಡದೆ, ಅವರಿಂದ ಏನನ್ನೂ ಬೇಡದೆ, ತಮ್ಮ ಕೌಶಲ್ಯ ಮತ್ತು ಶ್ರಮವನ್ನು ಬಳಸಿಕೊಂಡು, ಎಂತಹ ಪ್ರತಿಕೂಲ ವಾತಾವರಣದಲ್ಲೂ ಹಾಸಿಗೆ ಇದ್ದಷ್ಟು ಕಾಲು ಚಾಚಿ ಮಲಗುತ್ತಿದ್ದ, ಕುಶಲಕರ್ಮಿಗಳ ಚಿಕ್ಕ ಹಾಸಿಗೆಯನ್ನೂ ಸರ್ಕಾರ ಕಿತ್ತುಕೊಂಡು, ಅವರು ಬರೀ ನೆಲದ ಮೇಲೆ ಮಲಗುವಂತೆ ಮಾಡಿದೆ. ಸಾವಿರಾರು ವರ್ಷಗಳಿಂದ ಈ ದೇಶಕ್ಕೆ ಗೌರವ ಮತ್ತು ಹೆಮ್ಮೆ ತಂದು ಕೊಟ್ಟಿದ್ದ ಒಂದು ವರ್ಗವನ್ನು ಬುಡ ಸಮೇತ ಕಿತ್ತು ಹಾಕುವ ಹುನ್ನಾರವೇ ಜಿ ಎಸ್ ಟಿ ಆಗಿದೆ.

ನೂರು ವರ್ಷದ ಹಿಂದೆ ಗಾಂಧಿ

ಡಿಸೆಂಬರ್, ೧೯೧೭

ಡಿಸೆಂಬರ್ ೧ ಮತ್ತು ೨ ರಂದು ಕಲ್ಕತ್ತಾದಿಂದ ಅಹಮದಾಬಾದಿಗೆ ಹೊರಟ ರೈಲಿನಲಿ ಗಾಂಧಿ ಪ್ರಯಾಣ ಮಾಡುತ್ತಿದ್ದಾರೆ. ಈ ಪ್ರವಾಸದಲ್ಲಿ ಮುಖ್ಯವಾಗಿ ಅಹಮದಾಬಾದಿನ ಗಿರಣಿ ಕಾರ್ಮಿಕರ ಕೂಲಿ ಹೆಚ್ಚಳ ಸಂಬಂಧ ಗಿರಣಿ ಮಾಲೀಕರೊಂದಿಗೆ ಚರ್ಚಿಸುವುದಿದೆ.

ಪ್ಲೇಗ್ ಕಾಯಿಲೆ ಸಾಂಕ್ರಾಮಿಕವಾಗಿ ಬೆಳೆದಿದೆ. ಈ ಸಂಬಂಧ ಗಾಂಧಿಯವರು ಡಿಸೆಂಬರ್ ೬ ರಂದು ಪ್ಲೇಗ್ ತಗುಲದಂತೆ ಇರುವುದು ಹೇಗೆ ಮತ್ತು ಅದರ ನಿಯಂತ್ರಣ ಹೇಗೆ ಎಂದು ಬರೆದ ಟಿಪ್ಪಣಿ ಕುತೂಹಲದಾಯಕವಾಗಿದೆ. ೧೧ ಅಂಶಗಳ ಸುಮಾರು ೧೮೦೦ ಶಬ್ದದ ಈ ಟಿಪ್ಪಣಿಯಲ್ಲಿ ರಕ್ತ ಶುದ್ಧವಾಗಿಟ್ಟು ಕೊಂಡರೆ ದೇಹದ ಪ್ರತಿರೋಧಕ ಶಕ್ತಿ ಹೇಗೆ ಹೆಚ್ಚುತ್ತದೆ ಎಂದು ಹೇಳುತ್ತಾ ರಕ್ತವನ್ನು ಶುದ್ಧವಾಗಿಟ್ಟುಕೊಳ್ಳಲು ಅನುಸರಿಸಬೇಕಾದ ಕ್ರಮಗಳನ್ನು ಸೂಚಿಸುತ್ತಾರೆ. ಸಾರ್ವಜನಿಕ ಸ್ಥಳಗಳನ್ನು ಹೇಗೆ ಸ್ವಚ್ಛವಾಗಿಟ್ಟು ಕೊಳ್ಳಬೇಕೆಂಬುದನ್ನು ಬರೆಯುತ್ತಾ ನಮ್ಮ ಜನ ಬಹಿರ್ದೆಸೆಗೆ ಬಯಲಿನಲ್ಲಿ ಹೋದಾಗ ಕನಿಷ್ಟ ಅದರ ಮೇಲೆ ಒಂದಿಷ್ಟು ಮಣ್ಣು ಮುಚ್ಚಿ ಬರುವ ಕ್ರಮವನ್ನಾದರೂ ಅಳವಡಿಸಿಕೊಳ್ಳಬೇಕೆಂದು ಬರೆಯುತ್ತಾರೆ. ಬಹಿರ್ದೆಸೆಗೆ ಹೋಗುವ ಮೊದಲು ಹತ್ತಿರದಲ್ಲೇ ಬೂದಿ ಇಲ್ಲವೆ ಹುಡಿಯಾದ ಮಣ್ಣು ಲಭ್ಯವಿರುವಂತೆ ನೋಡಿಕೊಳ್ಳ ಬೇಕೆಂದೂ ಬರೆಯುತ್ತಾರೆ.

ಪೋನಿಕ್ಸ ಆಶ್ರಮದಲ್ಲಿರುವ ಮುದ್ರಣಾಲಯವನ್ನು ವ್ಯವಹಾರದ ದೃಷ್ಟಿಯಿಂದ ಪಕ್ಕದ ಡರ್ಬನ್ ನಗರಕ್ಕೆ ಸ್ಥಳಾಂತರಿಸ ಬೇಕೆಂಬ ಇಚ್ಛೆಯಿಂದ ಅಲ್ಲಿನ ಆಶ್ರಮವಾಸಿಗಳು ಬರೆದಿರುವ ಪತ್ರಕ್ಕೆ ಸ್ವಲ್ಪ ನಿಷ್ಠುರವಾಗಿಯೇ ಉತ್ತರಿಸುವ ಗಾಂಧಿ ಜಾಹಿರಾತು ಮತ್ತು ಹೆಚ್ಚಿನ ಕೆಲಸ ಪಡೆಯುವ ದೃಷ್ಟಿಯಿಂದ ಮುದ್ರಣಾಲಯವನ್ನು ಡರ್ಬನ್‌ಗೆ ಸ್ಥಳಾಂತರಿಸಬೇಕೆನ್ನುವ ನಿಮ್ಮ ಸಲಹೆಯನ್ನು ನಾನು ಒಪ್ಪಲಾರೆ ಬದಲಿಗೆ ಮುದ್ರಣಾಲಯವನ್ನೂ, ಇಂಡಿಯನ್ ಒಪಿನಿಯನ್ ಪತ್ರಿಕೆಯನ್ನೂ ನಿಲ್ಲಿಸುವುದು ವಾಸಿ ಎನ್ನುತ್ತಾರೆ.

ಡಿಸೆಂಬರ್ ೯ ನೇ ತಾರೀಖು ಮತ್ತೆ ಮೊತಿಹಾರಿ ತಲುಪಿದ ಗಾಂಧಿ ಮೊತಿಹಾರ ನಲ್ಲಿ ಶಾಲೆಯೊಂದನ್ನು ಸ್ಥಾಪಿಸುವ ಭರಾಟೆಯಲ್ಲಿದ್ದಾರೆ. ಅಲ್ಲಿಂದ ಮಗನಲಾಲರಿಗೆ ಬರೆದ ಪತ್ರದಲ್ಲಿ ನನ್ನ ಗ್ರಹಗತಿಗಳು ನನಗೆ ಪೂರಕವಾಗಿರುವ ನನ್ನ ಆದರ್ಶಗಳನ್ನು ಪ್ರಚಾರ ಮಾಡಲು ಎಷ್ಟು ಸಾಧ್ಯವೋ ಅಷ್ಟು ನಾನು ಪ್ರಯತ್ನಸಿಬೇಕು ಎನ್ನುತ್ತಾ, ನಾವು ನಮ್ಮ ಭವಿಷ್ಯವನ್ನು ಯೋಜಿಸಬಹುದೇ ವಿನ: ಅದನ್ನು ನೋಡುವ ಆಸೆ ಹೊಂದಿರಬಾರದು ಎಂದು ತಮ್ಮ ಅನುಭವದ ಮಾತು ಬರೆಯುತ್ತಾರೆ.

ಡಿಸೆಂಬರ ೨೦ ರಂದು ಮಗ ರಾಮದಾಸರಿಗೆ ಬರೆದ ಒಂದು ಪತ್ರದಲ್ಲಿ ನಿನ್ನ ಬದುಕಿನಲ್ಲಿ ಬರುವ ಕಹಿ ಅನುಭವಗಳನ್ನು ಒಪ್ಪಿಕೊ. ನಿನ್ನಲ್ಲಿ ನನಗೆ ಅಪಾರವಾದ ನಂಬಿಕೆಯಿದೆ. ನೀನು ಸಿಂಪಿಗನ ಕೆಲಸವನ್ನು ಮಾಡಲು ಯೋಚಿಸಿರುವದರಲ್ಲಿ ತಪ್ಪೇನಿಲ್ಲ. ಆ ಉದ್ಯೋಗದ ಅಶುದ್ಧತೆಯನ್ನು ನಿನ್ನ ಶುದ್ಧತೆಯಿಂದ ದೂರಮಾಡು. ಆಗ ಆ ಉದ್ಯೋಗವು ವಕೀಲನ ವೃತ್ತಿಗಿಂತ ಮೇಲ್ಮಟ್ಟದ್ದಾಗುತ್ತದೆ ಎಂದು ಬರೆಯುತ್ತಾರೆ. *

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest
janapada seva Trust Melkote, Dist- Mandya - 571431. Phone : 08236 299854
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237